

# ನಿವೇದಿತಾ ಹಾಗೂ ಭಾರತದ ಮಹಾವ್ಯಕ್ತಿಗಳು

ಡಾ. ಕೆ. ಅನಂತರಾಮು

‘ಮಹಿಮೆ ಮಹಿಮೆಯನರಿವುದು’ ಎಂಬಂತೆ, ಶ್ರೇಷ್ಠ ದರ್ಜೆಯ ಧೀರ ಸಾಧಕಿ ನಿವೇದಿತಾ ಒಡನಾಡಿದ ಮಹನೀಯರೆಲ್ಲರೂ ಮಹಾತ್ಮರೇ ಆಗಿದ್ದರು. ಅಂತಹ ಪ್ರಸಿದ್ಧ ಭಾರತೀಯ ಮಹಾ ವ್ಯಕ್ತಿಗಳ ಪರಿಚಯವನ್ನಿಲ್ಲಿ ಮಾಡಿಕೊಟ್ಟಿರುವ ಲೇಖಕರು ಕನ್ನಡದ ಪ್ರಸಿದ್ಧ ಬರಹಗಾರರು. ನಿವೃತ್ತ ಪ್ರಾಧ್ಯಾಪಕರಾಗಿರುವ ಅವರು ತಮ್ಮ ಅನೇಕ ಗ್ರಂಥಗಳು ಹಾಗೂ ಲೇಖನಗಳಿಂದ ಈಗಾಗಲೇ ಕನ್ನಡ ಓದುಗರಿಗೆ ಚಿರಪರಿಚಿತರಾಗಿದ್ದಾರೆ. ಉತ್ತಮ ಭಾಷಣಕಾರರೂ ಆಗಿರುವ ಅವರು ‘ವಿವೇಕ ಪ್ರಭ’ದಲ್ಲಿ ಹಲವು ಲೇಖನಗಳನ್ನೂ, ಸರಣಿ ಲೇಖನಗಳನ್ನೂ ಬರೆದಿದ್ದಾರೆ.

**ಸೋ**ದರಿ ನಿವೇದಿತಾ (೧೮೬೭–೧೯೧೧) ಭರತಖಂಡದ ವಿಭೂತಿ ಪುರುಷರಲ್ಲೊಬ್ಬಳು. ಸ್ವಾಮಿ ವಿವೇಕಾನಂದರ ಇಂಗ್ಲೆಂಡ್ ಯಾತ್ರೆಯಲ್ಲಿ ದೊರೆತ ದಿವ್ಯವಾದ ದೇವಕುಸುಮವೇ ನಿವೇದಿತಾ. ಅವಳು ವಿವೇಕಾನಂದರ ಶಿಷ್ಯೆಯಾಗಿ, ಅವರ ಕರಕಮಲಸಂಜಾತೆಯಾಗಿ ಭಾರತಕ್ಕೆ ಬಂದು, ತನ್ನ ತನುಮನಧನಗಳನ್ನೆಲ್ಲ ಭಾರತಕ್ಕೆಂದೇ ಸಮರ್ಪಿಸಿ ಅಜರಾಮರವಾದ ಕೀರ್ತಿಗೆ ಪಾತ್ರಳಾಗಿಬಿಟ್ಟಳು. ಅವಳು ಬಹುಮುಖಪ್ರತಿಭಾಸಂಪನ್ನೆಯಾಗಿದ್ದಳು. ಸಾಹಿತ್ಯ ನಿರ್ಮಾಣ, ಸಮಾಜಸೇವೆ, ರಾಷ್ಟ್ರೀಯ ಶಿಕ್ಷಣ, ಸ್ವದೇಶೀ ಆಂದೋಲನ, ರಾಷ್ಟ್ರ ಜಾಗೃತಿ, ಭಾರತೀಯ ಕಲೆ ಮತ್ತು ಸಂಸ್ಕೃತಿಯ ಪುನರುತ್ಥಾನ, ಸ್ವಾತಂತ್ರ್ಯಸಂಗ್ರಾಮ, ಮಹಿಳೋದ್ಧಾರ – ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಆನಂದೋತ್ಸಾಹಗಳಿಂದ ದುಡಿದು ಕೀರ್ತಿಶೇಷಳಾಗಿಬಿಟ್ಟಳು. ಕೋಲ್ಕತ್ತೆಯನ್ನು ತನ್ನ ಕರ್ಮಭೂಮಿಯನ್ನಾಗಿಸಿಕೊಂಡು ಬಿರುಗಾಳಿಯಂತೆ ಭರತಖಂಡವನ್ನೆಲ್ಲ ಸುತ್ತಾಡಿ, ತನ್ನ ವಾಗ್ವೈಭವದಿಂದ ಸರ್ವರ ಮೇಲೂ ತನ್ನ ಪ್ರಭಾವವನ್ನು ಬೀರಿದಳು. ಭಾರತದ ಅನೇಕ ಪ್ರತಿಭಾಸಂಪನ್ನರಾದ ವ್ಯಕ್ತಿಗಳು ನಿವೇದಿತಾಳ ಸಂಪರ್ಕಕ್ಕೆ ಬಂದು ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಂಡರು. ಅವಳಿಂದ ತಮಗೆ ಬೇಕುಬೇಕಾದ ಲಾಭಗಳನ್ನು ಪಡೆದುಕೊಂಡರು. ಆ ಗುಂಪಿನಲ್ಲಿ ವಿಜ್ಞಾನಿಗಳು, ಸಾಹಿತಿಗಳು, ಪತ್ರಿಕೋದ್ಯಮಿಗಳು, ಸಮಾಜಸೇವಕರು, ಕಲಾವಿದರು, ಇತಿಹಾಸ ಸಂಶೋಧಕರು, ಸ್ವಾತಂತ್ರ್ಯ ಹೋರಾಟಗಾರರು – ಮುಂತಾದ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಪುಣ್ಯಜೀವಿಗಳಿದ್ದಾರೆ. ಅವರಲ್ಲಿ ಪ್ರಮುಖರಾದ ಕೆಲವರನ್ನು ಪರಿಚಯ ಮಾಡಿಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ.

## ಜಗದೀಶಚಂದ್ರಬೋಸ್ ದಂಪತಿಗಳು

ಕೋಲ್ಕತ್ತೆಯಲ್ಲಿ ವಾಸವಾಗಿದ್ದ ಜಗದೀಶಚಂದ್ರ ಬೋಸರು ವಿಶ್ವವಿಖ್ಯಾತ ವಿಜ್ಞಾನಿಯಾಗಿದ್ದರು. ಲಂಡನ್ ವಿಶ್ವವಿದ್ಯಾನಿಲಯದಿಂದ ಡಿ.ಎಸ್ಸಿ ಪದವಿ ಪಡೆದಿದ್ದರು. ವಿದ್ಯುತ್ ಅಲೆಗಳನ್ನು ಕುರಿತಂತೆ, ಸಜೀವ ಮತ್ತು ನಿರ್ಜೀವವಸ್ತುಗಳನ್ನು ಕುರಿತಂತೆ ಅವರು ಸಂಶೋಧನೆಗಳನ್ನು ನಡೆಸುತ್ತ ಖ್ಯಾತನಾಮರಾಗಿದ್ದರು. ನಿವೇದಿತಾಳಾದರೋ ತಾನು ಕೋಲ್ಕತ್ತೆಗೆ ಬಂದ ತರುಣದಲ್ಲಿಯೇ (೧೮೯೮) ತಾನೇ ಮುಂದಾಗಿ ಬೋಸರನ್ನು ಭೇಟಿಯಾದಳು. ಭಾರತೀಯರೊಬ್ಬರು ವಿಜ್ಞಾನರಂಗದಲ್ಲಿ ಹೀಗೆಲ್ಲ ಮುಂದುವರಿದಿದ್ದಾರಲ್ಲ, ಅಂಥವರನ್ನು ಪ್ರೋತ್ಸಾಹಿಸಿ ಮೇಲೆ ತರಬೇಕಲ್ಲವೆ, ನನ್ನ ಸದ್ಗುರುವೂ ಅದನ್ನೇ ಬಯಸುತ್ತಿದ್ದಾರಲ್ಲವೇ ಎಂಬುದೇ ನಿವೇದಿತಾಳ ಅಂತರಂಗದ ಅಪೇಕ್ಷೆಯಾಗಿತ್ತು. ಜಗದೀಶಚಂದ್ರಬೋಸರ ಪತ್ನಿ ಅಬಲಾ ಬೋಸ್ ಕೂಡ ನಿವೇದಿತಾಳ ನಡೆನುಡಿಗಳಿಂದ ಆಕರ್ಷಿತರಾಗಿ, ಅವಳ ಗಣ್ಯ ಗೆಳತಿಯರಲ್ಲಿ ಒಬ್ಬರಾಗಿಬಿಟ್ಟರು.





ಜಗದೀಶಚಂದ್ರಬೋಸರು ೧೯೦೦ರಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ನಡೆದ ಅಂತರಾಷ್ಟ್ರೀಯ ಭೌತಶಾಸ್ತ್ರದ ಸಮ್ಮೇಳನದಲ್ಲಿ ಭಾಗಿಯಾದರು. ಆ ಹೊತ್ತಿನಲ್ಲಿ ನಿವೇದಿತಾ ವಿದೇಶ ಪ್ರವಾಸದಲ್ಲಿದ್ದು, ತಾನೂ ಆ ಸಮ್ಮೇಳನಕ್ಕೆ ಹೋದಳು. ಆ ಸಭೆಯಲ್ಲಿ ಬೋಸರು ‘ಸಜೀವ ಮತ್ತು ನಿರ್ಜೀವ ವಸ್ತುಗಳ ಪ್ರತಿಕ್ರಿಯೆ’ ಎಂಬ ವಿಷಯದ ಮೇಲೆ ತಮ್ಮ ಪ್ರಬಂಧವನ್ನು ಮಂಡಿಸಿದರು. ಆ ವಿಚಾರಧಾರೆಯಿಂದ ನಿವೇದಿತಾ ಸಂಭ್ರಮದಿಂದ ತಲೆದೂಗಿ ಬೋಸರ ಬೆನ್ನು ತಟ್ಟಿದಳು. ಬೋಸರು ಹೆಚ್ಚಿನ ಸಂಶೋಧನೆಗಳನ್ನು ನಡೆಸುವ ಆಸೆಯಿಂದ, ಪ್ಯಾರಿಸ್‌ನಿಂದ ಲಂಡನ್ನಿಗೆ ಬಂದರು. ನಿವೇದಿತಾ

ಕೂಡ ಅವರೊಡನೆ ಲಂಡನ್ನಿಗೆ ಬಂದಳು. ಅದು ಅವಳ ಪೂರ್ವ ಜೀವನದ ಪುಣ್ಯಭೂಮಿಯಲ್ಲವೆ! ಲಂಡನ್ನಿನ ಕೆಲವು ವಿಜ್ಞಾನಿಗಳು ಬೋಸರ ಮೇಲಿನ ಹೊಟ್ಟೆಗಿಚ್ಚಿನಿಂದಲೂ, ದಾಸ್ಯಕ್ಕೆ ತುತ್ತಾಗಿರುವ ಭಾರತದಿಂದ ಬಂದವರೆಂಬ ತಿರಸ್ಕಾರದಿಂದಲೂ, ಅವರ ಸಂಶೋಧನೆಗೆ ಅಡ್ಡಿಯೊಡ್ಡಲು ಪ್ರಯತ್ನಿಸಿದರು. ಆಗ ನಿವೇದಿತಾ ಬೋಸರ ಬೆಂಬಲಕ್ಕೆ ನಿಂತು, ಆ ಅಡ್ಡಿಆತಂಕಗಳನ್ನೆಲ್ಲ ಕಡಿದು ಹಾಕಿದಳು.

ಲಂಡನ್ನಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾಗಲೇ ಬೋಸರು ಕಾಯಿಲೆಗೆ ತುತ್ತಾಗಿ ಹಾಸುಗೆ ಹಿಡಿದು ಮಲಗಿಬಿಟ್ಟರು. ಒಡನೆಯೆ ನಿವೇದಿತಾ ತನ್ನ ತಾಯಿ ಮೇರಿಯು ವಾಸವಾಗಿದ್ದ ವಿಂಬಲ್ಡನ್ ಎಂಬಲ್ಲಿಗೆ ಕರೆದೊಯ್ದು, ಸೂಕ್ತವಾದ ಔಷಧೋಪಚಾರಗಳನ್ನು ಮಾಡಿ, ಅವರು ಚೇತರಿಸಿಕೊಳ್ಳುವಂತೆ ಮಾಡಿದಳು. ಅದೇ ಕಾರಣವಾಗಿ ಬೋಸರು ನಿವೇದಿತಾಳನ್ನು ತಾಯಿಯಂತೆ ಕಂಡು, ತಮ್ಮ ಹೃದಯಕ್ಕೆ ತುಂಬಿಕೊಂಡುಬಿಟ್ಟರು. ನಿವೇದಿತೆಯಾದರೋ ತನಗಿಂತ ಬೋಸರು ಹತ್ತು ವರ್ಷ ದೊಡ್ಡವರಾದರೂ ಅವರನ್ನು ವಾತ್ಸಲ್ಯದಿಂದ 'ಖೋಕಾ' ಅಂದರೆ ಮಗುವೇ ಎಂದು ಕರೆಯುತ್ತಾ ಪ್ರೇಮಾಮೃತವನ್ನೇ ಕರೆಯುತ್ತಿದ್ದಳು. ಶ್ರೀಮಾತೆಯವರು ನಿವೇದಿತಾಳನ್ನು ಮಮತೆಯಿಂದ 'ಖೂಕಿ' ಎಂದು ಕರೆಯುತ್ತಿದ್ದುದನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.

ಅಲ್ಲಿಂದ ಮುಂದಕ್ಕಂತೂ ನಿವೇದಿತೆಯು ಬೋಸರ ಕುಟುಂಬದ ಸದಸ್ಯರಲ್ಲಿ ಒಬ್ಬಳೋ ಎಂಬಂತಾಗಿಬಿಟ್ಟಳು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಸಂಬಂಧವಾಗಿ ನಿವೇದಿತಾ ಆಗಾಗ ಅಬಲಾ ಬೋಸರೊಡನೆ ವಿಚಾರ ವಿನಿಮಯ ನಡೆಸುತ್ತಿದ್ದಳು. ಬಂಗಾಳದ ಮಹಿಳೆಯರ ಮಡಿವಂತಿಕೆಯೇ ಕಾರಣವಾಗಿ ನಿವೇದಿತೆಯ ಶಿಕ್ಷಣ ಯೋಜನೆ ಸಫಲವಾಗಲಾರದೆಂಬ ಸಂದೇಹವನ್ನು ಅಬಲಾ ಬೋಸ್ ಮೊದಲಿಗೆ ವ್ಯಕ್ತಪಡಿಸಿದರು. ಆದರೆ ನಿವೇದಿತಾ ತನ್ನ ಉದಾರಶೀಲ ಮಾನವೀಯ ಸದ್ಗುಣಗಳಿಂದ ಸಂಪ್ರದಾಯಶರಣರ ಹೃದಯವನ್ನು ಗೆದ್ದು, ತನ್ನ ಕಾರ್ಯಯೋಜನೆಯಲ್ಲಿ ಸಫಲತೆಯನ್ನು ಸಾಧಿಸಿದಳು. ಅದನ್ನು ಕಂಡಾಗ ಮುಂದಕ್ಕೆ ಅಬಲಾ ಬೋಸರೇ ಮೂಗಿನ ಮೇಲೆ ಬೆರಳೇರಿಸಿದರು. ನಿವೇದಿತಾಳ ಹೆಣ್ಣುಮಕ್ಕಳ ಶಾಲೆಯಲ್ಲಿ ಮಹಿಳಾ ವಿಭಾಗವೊಂದು ಪ್ರಾರಂಭವಾದಾಗ, ಆ ಮಹಿಳೆಯರಿಗೆ ಓದುಬರೆಹ ಕಲಿಸಲು ಜಗದೀಶಚಂದ್ರಬೋಸರು ತಮ್ಮ ಸೋದರಿ ಲಾವಣ್ಯಪ್ರಭಾ ಬೋಸರನ್ನೇ ಕಳುಹಿಸಿಕೊಟ್ಟರು.

ತನ್ನ ಜೀವನ ಪರ್ಯಂತ ನಿವೇದಿತಾ ಜಗದೀಶ ಚಂದ್ರಬೋಸರ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತಿದ್ದಳು. ಅವರ ಸುಖದುಃಖಗಳಲ್ಲಿ ಭಾಗಿಯಾಗುತ್ತಿದ್ದಳು. ''ದಣಿದಾಗಲೆಲ್ಲ, ಬೇಸರವಾದಗಲೆಲ್ಲಾ, ನಾನು ನಿವೇದಿತಾಳಲ್ಲಿ ಆಶ್ರಯಪಡೆಯುತ್ತಿದ್ದೆ'' ಎಂದು ಬೋಸರೇ ಬರೆದಿದ್ದಾರೆ. ೧೯೦೧ರ ತರುವಾಯ ಲಂಡನ್ನಿನ 'ರಾಯಲ್ ಸೊಸೈಟಿ' ಎಂಬ ಸಂಸ್ಥೆಯು ಬೋಸರ ಲೇಖನಗಳನ್ನಾಗಲಿ, ಪ್ರಬಂಧಗಳನ್ನಾಗಲಿ ಪ್ರಕಟಿಸುವುದನ್ನು ಅಕಾರಣವಾಗಿ ನಿಲ್ಲಿಸಿಬಿಟ್ಟಿತು. ಆಗ ಆ ಕೆಲಸವನ್ನು ನಿವೇದಿತೆಯೇ ಕೈಗೆತ್ತಿಕೊಂಡಳು. ಬೋಸರ ಲೇಖನಗಳ ಆಂಗ್ಲ ಶೈಲಿಯನ್ನೆಲ್ಲ ಚೆನ್ನಾಗಿ ಸಂಸ್ಕರಿಸಿ, ತಾನೇ ಧನಸಂಗ್ರಹ ಮಾಡಿ, ಅವುಗಳನ್ನು ಗ್ರಂಥಗಳ ರೂಪದಲ್ಲಿ ಹೊರತಂದಳು. ಅಷ್ಟು ಮಾತ್ರವಲ್ಲದೆ ಬೋಸರ ಸಂಶೋಧನೆಗಳ ಮೌಲಿಕತೆಯನ್ನು ಕುರಿತು ವಿವಿಧ ಆಂಗ್ಲಪತ್ರಿಕೆಗಳಲ್ಲಿ ಲೇಖನಗಳನ್ನು ತಾನೇ ಬರೆದು, ಪ್ರಕಟವಾಗುವಂತೆ ನೋಡಿಕೊಂಡಳು. 'ಜಗದೀಶಚಂದ್ರ ಬೋಸ್' ಎಂಬ ಶೀರ್ಷಿಕೆಯಲ್ಲಿಯೇ ಹಲವು ಸಭೆ ಸಮಾರಂಭಗಳಲ್ಲಿ ಅವರ ಸಾಧನೆ, ಸಿದ್ಧಿಗಳನ್ನು ಎತ್ತಿಹಿಡಿಯುವ ಉಪನ್ಯಾಸಗಳನ್ನು ಮಾಡಿದಳು. ''ಜಗದೀಶಚಂದ್ರಬೋಸರು ಮಾಡಿರುವ ಪ್ರತಿಯೊಂದು ಸಾಧನೆಯಲ್ಲಿಯೂ ನಿವೇದಿತಾಳ ಪಾತ್ರವಿದೆ. ಅಲ್ಲೆಲ್ಲ ಅವಳಿಗೂ ಒಂದು ಸ್ಥಾನ ಸಲ್ಲಲೇಬೇಕು'' ಎಂದು ರವೀಂದ್ರನಾಥ ಠಾಕೂರರು ಅಭಿಪ್ರಾಯಪಟ್ಟಿದ್ದಾರೆ.



ನಿವೇದಿತಾ ಜೊತೆಗೆ ಅಬಲಾ ಬೋಸ್ (ಬಲತುದಿ)

ನಿವೇದಿತೆಯು ಬೋಸ್ ದಂಪತಿಗಳೊಡಗೂಡಿ ಭಾರತದ ಮಾಯಾವತಿ, ಆಲ್ಮೋರಾ, ಬೋಧಗಯಾ, ಬದರಿ, ಕೇದಾರ ಮುಂತಾದ ಕೆಲವು ದಿವ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಿದಳು. ಅವಳ ಮೇಲಿನ ಆದರದಿಂದಾಗಿ ಬೋಸರ ಸೋದರಳಿಯ ಅರವಿಂದ ಮೋಹನ ಬೋಸ್ ಕೂಡ ಬದರಿ–ಕೇದಾರ ಯಾತ್ರೆಗೆ ಜೊತೆಗಾರರಾದರು. ೧೯೦೬ರಲ್ಲಿ ಬಂಗಾಳದಲ್ಲಿ ಒಮ್ಮೆ ಅನಾವೃಷ್ಟಿಯಾಗಿ ಮತ್ತೊಮ್ಮೆ ಅತಿವೃಷ್ಟಿಯಾಗಿ ಜನರು ಸಂಕಟಕ್ಕೀಡಾದರು. ಆ ಹೊತ್ತಿನಲ್ಲಿ ರಾಮಕೃಷ್ಣಸಂಘವು ಪರಿಹಾರಕಾರ್ಯಗಳನ್ನು ಕೈಗೆತ್ತಿಕೊಂಡಿತು. ನಿವೇದಿತಾ ಕೂಡ ಆ ಸೇವಾಕಾರ್ಯಗಳಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಳು. ದೇಹಶ್ರಮವನ್ನೂ ಲೆಕ್ಕಿಸದೆ ಅಹರ್ನಿಶಿ ದುಡಿದುದೇ ಕಾರಣವಾಗಿ ಅವಳು ಕಾಯಿಲೆಗೆ ತುತ್ತಾಗಿಬಿಟ್ಟಳು. ಮೆನಿಂಜೈಟಿಸ್ ಎಂಬ ಮೆದುಳಿನ ರೋಗ, ಮಲೇರಿಯಾ ಎಂಬ ಜ್ವರದ ರೋಗ ಅವಳನ್ನು ಹಣ್ಣುಮಾಡಿಬಿಟ್ಟಿತು. ಆ ಹೊತ್ತಿನಲ್ಲಿ ಬೋಸ್‌ದಂಪತಿಗಳು, ನಿವೇದಿತಾ ತಮಗೆ ಮಾಡಿರುವ ಉಪಕಾರಾವಳಿಗಳನ್ನು ಸ್ಮರಿಸಿಕೊಳ್ಳುತ್ತ, ಅವಳ ಸೇವೆ ಶುಶ್ರೂಷೆಗಳನ್ನು ಮಾಡಲು ಕಟಿಬದ್ಧರಾಗಿ ನಿಂತರು.

೧೯೧೧ನೆಯ ಅಕ್ಟೋಬರ್ ತಿಂಗಳಿನಲ್ಲಿ ನಿವೇದಿತಾ ಮಾರಣಾಂತಿಕವಾದ ಅನಾರೋಗ್ಯಕ್ಕೆ ತುತ್ತಾದಳು. ಆರೋಗ್ಯ ಸುಧಾರಣೆ

ಯಾದರೆ ಆಗಲಿ ಎಂಬ ವಿಶ್ವಾಸದಿಂದ ಸುಂದರ ಗಿರಿಧಾಮವಾದ ಡಾರ್ಜಿಲಿಂಗ್ ಪಟ್ಟಣಕ್ಕೆ ಪಯಣಬೆಳೆಸಿದಳು. ಅವಳ ಆರೈಕೆ ಮಾಡಲು ಬೋಸ್ ದಂಪತಿಗಳೂ ಹಿಂಬಾಲಕರಾದರು. ಆದರೆ ಚೇತರಿಕೆ ಸಾಧ್ಯವಾಗದೆ, ಕೆಲವೇ ದಿನಗಳಲ್ಲಿ ಮೃತ್ಯುವು ಅವಳನ್ನು ತನ್ನ ಮಡಿಲಿಗೆ ಸೇರಿಸಿಕೊಂಡುಬಿಟ್ಟಿತು. ಆಗ ಬೋಸ್ ದಂಪತಿಗಳು ಕಣ್ಣೀರ ಕೋಡಿಯನ್ನು ಹರಸಿದರು. ಅಬಲಾ ಬೋಸರು ಆಕೆಯನ್ನು ಕುರಿತು ಬರೆಯುತ್ತ, ''ನಿವೇದಿತಾ ವಿಶಿಷ್ಟ ಪ್ರಕೃತಿಯ ಮಹಿಳೆಯಾಗಿದ್ದಳು. ಅವಳು ಅಗ್ನಿಯಂತೆ ತೇಜಸ್ವಿನಿಯಾಗಿದ್ದಳು. ಅವಳಲ್ಲಿದ್ದ ಆತ್ಮಾರ್ಪಣೆಯ ಉಜ್ವಲತೆಯನ್ನು ನಾನು ಮತ್ತಾರಲ್ಲಿಯೂ ಕಂಡಿಲ್ಲ. ಅವಳು ಸ್ವಚ್ಛವಾದ ದೃಷ್ಟಿಕೋನದಿಂದಲೂ ತೀಕ್ಷ್ಣವಾದ ಬುದ್ಧಿಶಕ್ತಿಯಿಂದಲೂ ಉನ್ನತವಾದ ವ್ಯಕ್ತಿತ್ವದಿಂದಲೂ ತುಂಬಿ ಮೆರೆಯುತ್ತಿದ್ದಳು'' ಎಂದು ಹೃದಯತುಂಬಿ ಕೊಂಡಾಡಿದ್ದಾರೆ.

ಭಾರತೀಯ ವಿಜ್ಞಾನಿಗಳಿಗೆ ಪ್ರೋತ್ಸಾಹ ನೀಡುವಂತಹ ಸಂಶೋಧನ ಸಂಸ್ಥೆಯೊಂದನ್ನು ತೆರೆಯಬೇಕೆಂದು ನಿವೇದಿತಾ ಹಂಬಲಿಸುತ್ತಿದ್ದಳು. ಆದರೆ ಅದು ಅವಳ ಜೀವಿತಕಾಲದಲ್ಲಿ ಕೈಗೂಡಲಿಲ್ಲ. ಸತ್ಯವಂತರ ಸಂಕಲ್ಪಗಳು ವ್ಯರ್ಥವಾಗುವುದಿಲ್ಲ ಎಂದು ಹಿರಿಯರು ಹೇಳುತ್ತಾರೆ. ಅದರಂತೆ ನಿವೇದಿತಾ ಮುಕ್ತಳಾದ ಆರು ವರ್ಷಗಳ ತರುವಾಯ ಜಗದೀಶಚಂದ್ರರ ಪ್ರಯತ್ನದ ಫಲವಾಗಿ 'ಬಸು ವಿಜ್ಞಾನ ಮಂದಿರ'ದ ಉದ್ಘಾಟನೆಯಾಯಿತು. ಆ ಸಂದರ್ಭದಲ್ಲಿ ಬೋಸರು ನಿವೇದಿತಾಳನ್ನು ಸ್ಮರಿಸಿಕೊಳ್ಳುತ್ತ ''ನನ್ನ ವೈಜ್ಞಾನಿಕ ಅನ್ವೇಷಣೆಗೆ ಆಸರೆಯಾಗಿದ್ದ ಆ ಪುಣ್ಯಮಾತೆಯ ಪ್ರೇರಣೆಯನ್ನೂ ಸಹಾಯವನ್ನೂ ನಾನೀಗ ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ'' ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು. ಆ ವಿಜ್ಞಾನ ಮಂದಿರದ ಪ್ರವೇಶದ್ವಾರದಲ್ಲಿ 'ಬೆಳಕು ತಂದ ಮಾತೆ' ಎಂಬ ಅರ್ಥಬರುವ 'ಲೇಡಿ ಆಫ್ ದಿ ಲ್ಯಾಂಪ್' ಎಂಬ ಶೀರ್ಷಿಕೆಯನ್ನುಳ್ಳ ನಿವೇದಿತಾಳ ಉಬ್ಬುಚಿತ್ರವೊಂದು ಎಲ್ಲರ ಕಣ್ಸೆಳೆಯುತ್ತ ಅವಳ ನೆನಪನ್ನು ಶಾಶ್ವತವಾಗಿಸಿದೆ.

ತಮ್ಮ ಕೊನೆಗಾಲದಲ್ಲಿ ಬೋಸರು ತಮ್ಮ ಉಯಿಲಿನಲ್ಲಿ ನಿವೇದಿತಾಳ ಸ್ಮಾರಕವನ್ನು ರಚಿಸಲು ಒಂದು ಲಕ್ಷರೂಪಾಯಿಗಳನ್ನು ಇಟ್ಟುಹೋದರು. ಅದನ್ನು ಬಳಸಿಕೊಂಡು ಅಬಲಾ ಬೋಸರು ನಿವೇದಿತಾಳ ಹೆಸರಿನಲ್ಲಿ ಕೋಲ್ಕತ್ತೆಯ ಮಹಿಳಾ ಅಭಿವೃದ್ಧಿ ಸಂಸ್ಥೆಯೊಂದರಲ್ಲಿ ಸಭಾಂಗಣವೊಂದನ್ನು ಕಟ್ಟಿಸಿದರು. ಅಲ್ಲಿ ನಿವೇದಿತೆಯ ಆಕರ್ಷಕವಾದ ವರ್ಣಚಿತ್ರವೊಂದಿದೆ. ಆ ಚಿತ್ರವು ನಿವೇದಿತಾಳ ಭಾರತಪ್ರೇಮ, ಚಿತ್ರಕಲಾಪ್ರೇಮ ಮತ್ತು ಬೋಸ್ ಕುಟುಂಬದೊಡನಿದ್ದ ಅವ್ಯಾಜ ಪ್ರೇಮಗಳ ತ್ರಿವೇಣೀಸಂಗಮವಾಗಿದೆ.

### ಬಶೀಶ್ವರ ಸೇನ್

ಜಗದೀಶ ಚಂದ್ರಬೋಸರನ್ನು ನೆನೆಯುವಾಗಲೇ ಅವರ ಶಿಷ್ಯರಾದ ಬಶೀಶ್ವರಸೇನ್ ಅವರನ್ನೂ ನೆನೆಯಬೇಕು. ಅವರು ಸಸ್ಯಶಾಸ್ತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಸುತ್ತ ತುಂಬಾ ಪ್ರಸಿದ್ಧರಾಗಿದ್ದರು. ನಿವೇದಿತೆಯೇ ಬಶೀಶ್ವರರಿಗೆ ಬೋಸರ ಪರಿಚಯ ಮಾಡಿಕೊಟ್ಟು, ಅವರ ಮಾರ್ಗದರ್ಶನದಲ್ಲಿ ಹೆಚ್ಚಿನ ಸಂಶೋಧನೆ ನಡೆಸುವಂತೆ ಪ್ರೇರಣೆ ನೀಡಿದಳು. ಅದು ಸೇನರಿಗೆ ಯಶಸ್ಸನ್ನು ತಂದುಕೊಟ್ಟಿತು. ''ನಿವೇದಿತಾಳ ಶ್ರೇಷ್ಠತೆಯನ್ನು ವರ್ಣಿಸಲು ನನ್ನಲ್ಲಿ ಶಬ್ದಗಳಿಲ್ಲ. ಅವಳು ಪ್ರತಿಪಾದಿಸುತ್ತಿದ್ದ ಶಕ್ತಿಯುತ ವಿಚಾರಗಳನ್ನು ನಾನು ಸಾಧ್ಯವಾದಷ್ಟು ಮಟ್ಟಿಗೆ ನನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇನೆ'' ಎಂದು ಬಶೀಶ್ವರ ಸೇನರು ಕೊಂಡಾಟದ ಮಾತುಗಳನ್ನಾಡಿದ್ದಾರೆ.



### ರವೀಂದ್ರನಾಥ ಠಾಕೂರ್



ನಿವೇದಿತೆಯ ಸಂಪರ್ಕಕ್ಕೆ ಬಂದು, ಅವಳಿಂದ ಪ್ರೇರಣೆ ಪಡೆದುಕೊಂಡ ವಿಶ್ವಮಾನ್ಯ ಸಾಹಿತಿಗಳಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ರವೀಂದ್ರನಾಥ ಠಾಕೂರರು ಒಬ್ಬರು ಎಂಬುದನ್ನು ಅಭಿಮಾನದಿಂದ ಸ್ಮರಿಸಿಕೊಳ್ಳಬೇಕಾಗಿದೆ. ನಿವೇದಿತಾ ಭಾರತಕ್ಕೆ ಕಾಲಿಟ್ಟ ಹೊಸತರಲ್ಲಿಯೇ ತನ್ನ ಸದ್ಗುರು ಸ್ವಾಮಿ ವಿವೇಕಾನಂದರೊಡಗೂಡಿ ರವೀಂದ್ರನಾಥರ ತಂದೆಯವರಾದ ಮಹರ್ಷಿ ದೇವೇಂದ್ರನಾಥ ಠಾಕೂರರ ದರ್ಶನ ಪಡೆದುಕೊಳ್ಳಲು ಹೋಗಿದ್ದಳು. ಅವರೊಡನೆ ಮಾತುಕತೆಯಾಡುವಾಗ ಆಗತಾನೆ ಪ್ರವೃದ್ಧಮಾನರಾಗುತ್ತಿದ್ದ ರವೀಂದ್ರನಾಥರೂ ಅಲ್ಲಿಯೇ ಇದ್ದರು. ರವೀಂದ್ರರ ನಡೆನುಡಿಗಳಿಂದಲೂ ನಯವಿನಯಗಳಿಂದಲೂ ನಿವೇದಿತಾ ಆಗಿಂದಾಗಲೇ ಅವರತ್ತ ಆಕರ್ಷಿತಳಾಗಿಬಿಟ್ಟಳು. ಆಗೊಮ್ಮೆ ಈಗೊಮ್ಮೆ ಠಾಕೂರರ ಮನೆಯನ್ನು ಹೊಕ್ಕು ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದಳು. ಆಗಿನ್ನೂ ರವೀಂದ್ರರಿಗೆ ನಿವೇದಿತೆಯ ಶಕ್ತಿಸಾಮರ್ಥ್ಯಗಳೇನು, ಅವಳು ಭಾರತಮಾತೆಗಾಗಿ ತನ್ನನ್ನು ಸಮರ್ಪಿಸಿಕೊಂಡಿರುವುದರ ಗಾಢತೆ, ತೀವ್ರತೆಗಳೇನು ಎಂಬುದೇನೂ ಹೆಚ್ಚಾಗಿ ತಿಳಿದಿರಲಿಲ್ಲ. 'ಇಂಗ್ಲೆಂಡಿನಿಂದ ಭಾರತಕ್ಕೆ ಬಂದಿರುವ ಒಬ್ಬ ಧರ್ಮಪ್ರಚಾರಕಿ' ಎಂದಷ್ಟು ಮಾತ್ರವೇ ತಿಳಿದುಕೊಂಡಿದ್ದರೇನೋ!

ಹೀಗಾಗಿ ಒಂದು ದಿನ ರವೀಂದ್ರನಾಥರು ನಿವೇದಿತೆಯನ್ನು ಕುರಿತು, ''ನೀನು ಆಂಗ್ಲಭಾಷೆಯಲ್ಲಿ ಪ್ರವೀಣೆಯಾಗಿದ್ದೀಯೆ. ನನ್ನ ಮಗಳಿಗೆ ಇಂಗ್ಲಿಷ್ ಪಾಠ ಹೇಳಿಕೊಡಬೇಕು'' ಎಂದು ಕೇಳಿಕೊಂಡರು. ನಿವೇದಿತೆಯಾದರೋ ನೂರಕ್ಕೆ ನೂರು ಭಾರತೀಯಳಾಗಿದ್ದಳು. ಸನಾತನ ಹಿಂದೂ ಸಂಸ್ಕೃತಿಯ ಆಧಾರಸ್ತಂಭಗಳೆನಿಸಿದ ವೇದಶಾಸ್ತ್ರ ಪುರಾಣೇತಿಹಾಸಗಳ ಸಾರವನ್ನೆಲ್ಲ ಸದ್ಗುರು ವಿವೇಕಾನಂದರ ಕೃಪಾಶೀರ್ವಾದಗಳಿಂದ ಕರತಲಾಮಲಕವಾಗಿಸಿಕೊಂಡಿ

ದ್ದಳು. ಅವಳು ಸಂಸ್ಕೃತವನ್ನೂ ಕಲಿತಳು, ಬಂಗಾಳಿಯನ್ನೂ ಕಲಿತಳು. ಅವಳು ಬಂಗಾಳಿಯಲ್ಲಿ ಮಾತನಾಡುತ್ತಿದ್ದರೆ ಶ್ರೀಮಾತೆಯವರು ಪುಳಕಗೊಳ್ಳುತ್ತಿದ್ದರು. 'ಇದು ವೇದಕಾಲದ ಬಂಗಾಳಿ ಭಾಷೆ' ಎಂದು ಮಂದಹಾಸಬೀರುತ್ತ ಪ್ರಶಂಸೆ ಮಾಡುತ್ತಿದ್ದರು. ಅಂತಹ ನಿವೇದಿತಾ ರವೀಂದ್ರರ ಮಗಳಿಗೆ ಆಂಗ್ಲಭಾಷಾ ಬೋಧಕಿಯಾಗುತ್ತಾಳೆಯೆ! ''ಜಗತ್ತಿನ ಅತ್ಯಂತ ಶ್ರೇಷ್ಠವಾದ ಧರ್ಮಕ್ಕೆ ಭಾರತವು ಜನ್ಮಭೂಮಿಯಾಗಿದೆ. ಭಾರತದ ಮಹಿಳೆಯರೆಂದರೆ ಅವರೆಲ್ಲರೂ ಈ ಪುಣ್ಯಭೂಮಿಯ ಸುಪುತ್ರಿಯರಾಗಿದ್ದಾರೆ. ಅವರು ಪಾಶ್ಚಾತ್ಯ ಸಾಹಿತ್ಯವನ್ನು ಅಪ್ಪಿಕೊಳ್ಳದೆ ತಮ್ಮದೇ ನಾಡಿನ ಸಾಹಿತ್ಯವನ್ನು ಅಪ್ಪಿಕೊಳ್ಳಬೇಕು. ಒಂದು ವೇಳೆ ಹಾಗೆ ಮಾಡದೆ ಹೋದರೆ ಪಾಶ್ಚಾತ್ಯರ ರೀತಿನೀತಿಗಳು, ಆಡಂಬರದ ಶೈಲಿ, ಆಂಗ್ಲ ಶಿಕ್ಷಣ – ಈ ಮುಂತಾದುವೆಲ್ಲ ಸೇರಿಕೊಂಡು ಅವರ ವಿನಮ್ರತೆ, ಸೌಜನ್ಯಗಳನ್ನೇ ನಾಶಮಾಡಿ ಬಿಡುತ್ತವೆ'' ಎಂದು ಬೋಧಿಸುತ್ತಿದ್ದ ನಿವೇದಿತಾ ರವೀಂದ್ರರ ಕುವರಿಗೆ ಆಂಗ್ಲಪಾಠ ಹೇಳಿಕೊಡಲೊಪ್ಪುತ್ತಾಳೆಯೇ!

ರವೀಂದ್ರರ ಮಾತು ಕೇಳುತ್ತಿದ್ದಂತೆಯೇ ನಿವೇದಿತಾ ತಾಳ್ಮೆ ತಪ್ಪಿಬಿಟ್ಟಳು. ''ನಾನು ಭಾರತದ ಹೆಣ್ಣುಮಕ್ಕಳಿಗೆ ಆಂಗ್ಲಭಾಷೆಯನ್ನಾಗಲಿ, ಆಂಗ್ಲಸಂಸ್ಕೃತಿಯನ್ನಾಗಲಿ ಬೋಧಿಸಲು ಬಂದವಳಲ್ಲ. ಸನಾತನ ಸಂಸ್ಕೃತಿಯ ಪವಿತ್ರತಮ ವಿಚಾರಗಳ ಹಿನ್ನೆಲೆಯಲ್ಲಿ ಈ ನಿಮ್ಮ ಪುಟ್ಟಹುಡುಗಿಯ ವ್ಯಕ್ತಿತ್ವ ಅರಳಬೇಡವೆ? ಅದಕ್ಕೆ ಮೊದಲೇ ನೀವೂ ನಿಮ್ಮ ತಂದೆಯವರೂ ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿ ಈ ಮುದ್ದುಬಾಲೆಯನ್ನು ಹಾಳು ಮಾಡಬೇಕೆಂದು ಬಯಸಿದ್ದೀರಾ?'' ಎಂದು ಕೋಪದಿಂದ ಗುಡುಗಿದಳು.

ಆ ಮಾತುಗಳನ್ನು ಕೇಳಿ ರವೀಂದ್ರರು ಅವಾಕ್ಕಾದರು. ಅಲ್ಲಿಂದ ಮುಂದುಮುಂದಕ್ಕೆ ನಿವೇದಿತಾ ಎಂದರೆ ಯಾರು, ಏನು ಎಂಬುದೆಲ್ಲ ಕ್ರಮಕ್ರಮವಾಗಿ ಮನವರಿಕೆಯಾಯಿತು. ತಾವೇ ಆಗಾಗ ನಿವೇದಿತಾಳು ವಾಸವಾಗಿದ್ದ ಮನೆಗೆ ಬಂದು ಚರ್ಚೆಯಲ್ಲಿ ತೊಡಗುತ್ತಿದ್ದರು. ತಾವು ಹೊಸಹೊಸದಾಗಿ ಬರೆಯುತ್ತಿದ್ದ ಕವಿತೆಗಳನ್ನು ಅವಳ ಎದುರಿನಲ್ಲಿ ಭಾವಮಯರಾಗಿ ವಾಚನ ಮಾಡಿ ತೋರಿಸುತ್ತಿದ್ದರು. ಕವಿ ಹೃದಯಸಂಪನ್ನೆಯಾದ ನಿವೇದಿತೆಯು ಶಾಂತಚಿತ್ತದಿಂದ ಆಲಿಸಿ, ಆನಂದಿಸಿ ಪ್ರೋತ್ಸಾಹದ ಮಾತುಗಳನ್ನು ಹೇಳುತ್ತಿದ್ದಳು. ರವೀಂದ್ರರು ತಂದು ಓದಿದ ಅವರ 'ಕಾಬೂಲಿವಾಲ' ಎಂಬ ಸಣ್ಣಕತೆಯನ್ನು ಕೇಳಿದಾಗಲಂತೂ ನಿವೇದಿತಾ ಹರ್ಷಾತಿರೇಕದಿಂದ ಕುಣಿದಾಡಿಬಿಟ್ಟಳು. ಅಷ್ಟಕ್ಕೇ ಸುಮ್ಮನಾಗದೆ, ಅದನ್ನು ಬಂಗಾಳಿಯಿಂದ ಆಂಗ್ಲಭಾಷೆಗೆ ಅನುವಾದಿಸಿ, ಪ್ರಕಟಿಸಿ ಪ್ರೋತ್ಸಾಹಿಸಿದಳು. ತರುವಾಯದಲ್ಲಿ ನಿವೇದಿತಾ, ರವೀಂದ್ರರ ಕುಟುಂಬಕ್ಕೆ ಸೇರಿದ ಸರಳಾ ಘೋಷಾಲ್ ಎಂಬಾಕೆಯನ್ನೂ ತನ್ನ ಸ್ನೇಹವಲಯಕ್ಕೆ ಸೆಳೆದುಕೊಂಡಳು.

ಲಂಡನ್ನಿನಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾಗಲೇ ನಿವೇದಿತಾ ಸತ್ಯಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿದ್ದಳು. ಚರ್ಚಿಗೂ ಹೋಗುತ್ತಿದ್ದಳು. ಧರ್ಮಗುರುಗಳ ಪ್ರವಚನ ಕೇಳುವಾಗ 'ಇದೆಲ್ಲ ಅಸಂಬದ್ಧದ ಕಂತೆ' ಎಂದು ಅವಳಿಗೆ ನಿರಾಸೆಯಾಗುತ್ತಿತ್ತು. ಚರ್ಚಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟಳು. ಆ ಹೊತ್ತಿನಲ್ಲಿ ಬುದ್ಧ ಮತ್ತು ಬೌದ್ಧಧರ್ಮಕ್ಕೆ ಸಂಬಂಧಿಸಿದ ಕೆಲವು ಗ್ರಂಥಗಳನ್ನು ಅಧ್ಯಯನ ಮಾಡಿ ಹೇಗೋ ಕೊಂಚ ಸಮಾಧಾನಿಯಾಗಿದ್ದಳು. ವಿವೇಕಾನಂದರ ಸಂಪರ್ಕವಾದ ಮೇಲಂತೂ ಅವಳ ಹೃದಯ ಗ್ರಂಥಿಗಳೆಲ್ಲ ಕಡಿದು ಹೋದವು. ಸರ್ವಸಂಶಯಗಳೂ ನುಚ್ಚುನೂರಾದವು. ಬುದ್ಧನಂತೂ ಅವಳ ಅಂತರಂಗದಲ್ಲಿ ಕುಳಿತೇ ಇದ್ದನು. ಹೀಗಾಗಿ ಒಮ್ಮೆ ನಿವೇದಿತಾ ಬೋಸರೇ ಮೊದಲಾದ ವಿದ್ವನ್ಮಣಿಗಳೊಡಗೂಡಿ ಬೋಧಗಯೆಯ ಯಾತ್ರೆಯನ್ನು ಕೈಗೊಂಡಳು. ನಿವೇದಿತೆಯ ಚಿಂತನೆಗಳಿಂದ ಪ್ರಭಾವಿತರಾಗಿದ್ದ ರವೀಂದ್ರರೂ ಆ ತಂಡವನ್ನು ಸೇರಿಕೊಂಡರು.

ಬೋಧಗಯೆಯಲ್ಲಿ ನಿವೇದಿತಾ ನಿತ್ಯವೂ ಎಡ್ವಿನ್ ಆರ್ನಾಲ್ಡ್ ಎಂಬ ಕವಿಯ ಬುದ್ಧಚರಿತೆಯನ್ನೊಳಗೊಂಡ **'ಲೈಟ್ ಆಫ್ ಏಷ್ಯಾ'** ಎಂಬ ಕಾವ್ಯದ ಕೆಲವು ಪುಟಗಳನ್ನು ಭಾವಭರಿತಳಾಗಿ ಓದುತ್ತಿದ್ದಳು. ಆ ಕಾವ್ಯವಾಚನ ವೈಖರಿಯು ರವೀಂದ್ರರೇ ಆದಿಯಾಗಿ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತು. ತರುವಾಯ ವಾರೆನ್ ಹೇಸ್ಟಿಂಗ್ಸ್‌ನ **ಬೌದ್ಧಧರ್ಮ** ಎಂಬ ಕೃತಿಯಿಂದಲೂ ಕೆಲವು ಪುಟಗಳನ್ನು ಓದುತ್ತಿದ್ದಳು. ಬುದ್ಧದೇವನ ವಿಷಯದಲ್ಲಿದ್ದ ಗೌರವಾದರಗಳು ಆಗ ಅವಳ ಮುಖದ ಮೇಲೆ ಮೂಡಿಮುಳುಗುತ್ತಿದ್ದವು. ಕೇಳುಗರ ಹೃದಯದಲ್ಲಿಯೂ ಭಕ್ತಿತರಂಗಗಳು ಉಕ್ಕಿಹರಿಯುತ್ತಿದ್ದವು.


ರವೀಂದ್ರರಿಗೆ ಸಿಯಾಲ್ದ ಎಂಬ ಪಟ್ಟಣವು ಅತ್ಯಂತ ಪ್ರಿಯವಾಗಿತ್ತು. ಆಗಾಗ ಅಲ್ಲಿಗೆ ಹೋಗಿ ಏಕಾಂತದ ಆನಂದವನ್ನು ಸೂರೆ ಮಾಡುತ್ತಿದ್ದರು. ನಿವೇದಿತಾ ಕೂಡ ಬೋಸರನ್ನು ಜೊತೆ ಮಾಡಿಕೊಂಡು ಒಮ್ಮೆ ರವೀಂದ್ರರು ಅಲ್ಲಿದ್ದಾಗ ತಾನೂ ಹೋದಳು. ಅಲ್ಲಿ ನಿತ್ಯವೂ ನಿವೇದಿತಾ ಸಿಯಾಲ್ದದ ಸುತ್ತಮುತ್ತಲಿನ ಗ್ರಾಮಾಂತರಗಳಿಗೆ ಭೇಟಿಕೊಟ್ಟು, ಆ ಮುಗ್ಧಜನರೊಡನೆ ಬೆರೆಯುತ್ತ, ಅವರ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುತ್ತಿದ್ದಳು. ಗ್ರಾಮೀಣರ ವಿಷಯದಲ್ಲಿದ್ದ ನಿವೇದಿತೆಯ ಆ ಕಳಕಳಿಯನ್ನು ಕಂಡು ರವೀಂದ್ರರು ಆಶ್ಚರ್ಯಚಕಿತರಾದರು. ''ಇಂತಹ ಮಾತೃಪ್ರೇಮದ ಅಭಿವ್ಯಕ್ತಿಯನ್ನು ನಾನು ಹಿಂದೆಂದೂ ಕಂಡಿರಲಿಲ್ಲ. ನಿವೇದಿತಾಳ ಈ ಮಾತೃಪ್ರೇಮವು ಜಗತ್ತನ್ನೇ ತುಂಬಿಕೊಳ್ಳಬಲ್ಲದು'' ಎಂದು ರವೀಂದ್ರರು ಕೊಂಡಾಡಿದ್ದಾರೆ.

ನಿವೇದಿತಾಳ ಭಾರತಪ್ರೇಮ, ಸನಾತನ ಹಿಂದೂಧರ್ಮದ ಮೇಲಿನ ಶ್ರದ್ಧೆ ನಿಷ್ಠೆಗಳು, ಆಂಗ್ಲರ ಅವಗುಣಗಳ ಮೇಲಿನ ಅವಳ ತಿರಸ್ಕಾರ ಮುಂತಾದವು ರವೀಂದ್ರರನ್ನು ಮಂತ್ರಮುಗ್ಧರನ್ನಾಗಿಸುವ ಸಂಗತಿಗಳಾಗಿದ್ದವು. ಮುಂದಕ್ಕೆ ರವೀಂದ್ರರು ರಚಿಸಿದ **'ಗೋರಾ'** ಕಾದಂಬರಿಯಲ್ಲಿ ಈ ಸಂಗತಿಗಳ ಪ್ರಭಾವವನ್ನು ನಿಚ್ಚಳವಾಗಿ ಕಾಣಬಹುದು. ಭಾರತೀಯ ಸಂಸ್ಕೃತಿಯ ಅನನ್ಯತೆಯನ್ನು ಎತ್ತಿಹಿಡಿಯುವ **'ದಿ ವೆಬ್ ಆಫ್ ಇಂಡಿಯನ್‌ಲೈಫ್'** (೧೯೧೪) ಎಂಬ ನಿವೇದಿತಾಳ ಕೃತಿಗೆ ರವೀಂದ್ರರು ಅತ್ಯಂತ ಪ್ರೇಮದಿಂದ

ಮುನ್ನುಡಿಯೊಂದನ್ನು ಬರೆದಿದ್ದಾರೆಂಬುದನ್ನು ಕೂಡ ಈ ಹೊತ್ತಿನಲ್ಲಿ ಉಲ್ಲೇಖಿಸಬೇಕು. ನಿವೇದಿತಾಳ ಶೈಕ್ಷಣಿಕ ಚಿಂತನೆಗಳಿಂದ ಆಕರ್ಷಿತರಾಗಿದ್ದ ರವೀಂದ್ರರು, ''ನಿನ್ನ ಚಿಂತನ ಮಂಥನಗಳಿಗೆ ಅನುಗುಣವಾದ ಒಂದು ಶಾಲೆಯನ್ನು ನೀನು ನಮ್ಮ ಮನೆಯಂಗಳದಲ್ಲಿಯೇ ಪ್ರಾರಂಭಿಸಿದರೆ ಒಳ್ಳೆಯದಾಗುತ್ತದೆ'' ಎಂದು ಕೋರಿಕೊಂಡಿದ್ದರು. ಆದರೆ ಕಾರ್ಯಬಾಹುಳ್ಯದಿಂದಾಗಿ ನಿವೇದಿತೆಗೆ ಅದು ಸಾಧ್ಯವಾಗಲಿಲ್ಲ. ಆದರೆ ತರುವಾಯದ ಕಾಲದಲ್ಲಿ ರವೀಂದ್ರರು ಭಾರತೀಯ ಸಂಸ್ಕೃತಿಯ ಅಡಿಗಲ್ಲಿನ ಮೇಲೆ ಸ್ಥಾಪಿಸಿದ 'ಶಾಂತಿನಿಕೇತನ'ದ ಶಿಕ್ಷಣ ಕ್ರಮದ ಮೇಲೆ ನಿವೇದಿತಾಳ ಚಿಂತನೆಯ ಛಾಪು ಮೂಡಿತ್ತು ಎಂಬುದನ್ನು ತಪ್ಪದೆ ಹೇಳಬೇಕಾಗಿದೆ. ಈ ಕಾರಣದಿಂದಾಗಿಯೇ ರವೀಂದ್ರರು ನಿವೇದಿತಾಳನ್ನು 'ಲೋಕಮಾತಾ' ಎಂದು ಸಂಬೋಧಿಸಿ ಅಪಾರವಾದ ಗೌರವವನ್ನು ವ್ಯಕ್ತಗೊಳಿಸಿದ್ದಾರೆ.

ಚಿಂತನಮಂಥನಗಳ ಹೊತ್ತಿನಲ್ಲಿ ನಿವೇದಿತಾ-ರವೀಂದ್ರರ ನಡುವೆ 'ಭಾವಘರ್ಷಣೆ' ಎದ್ದು ನಿಲ್ಲುತ್ತಿತ್ತು. ಅವರ ಕೆಲವು ಆಲೋಚನೆಗಳನ್ನು ನಿವೇದಿತಾ ತನ್ನ ಕುಶಾಗ್ರಮತಿತ್ವದಿಂದ ನುಚ್ಚುನೂರು ಮಾಡಿಬಿಡುತ್ತಿದ್ದಳು. ''ಎಲ್ಲರಿಗಿಂತ ಹೆಚ್ಚಿನ ಪ್ರಯೋಜನವನ್ನು ನಾನು ನಿವೇದಿತಾಳಿಂದ ಪಡೆದುಕೊಂಡಿದ್ದೇನೆ. ಅವಳನ್ನು ನೆನೆದರೇ ಸಾಕು, ನನ್ನ ಶರೀರದಲ್ಲಿ ಶಕ್ತಿಯ ಸಂಚಾರವಾಗುತ್ತದೆ'' ಎಂದು ರವೀಂದ್ರರು ಒಂದೆಡೆ ಬರೆದಿದ್ದಾರೆ. ಇಷ್ಟೆಲ್ಲ ಆದರೂ ರವೀಂದ್ರರಿಗೆ ನಿವೇದಿತಾ ನೆರವೇರಿಸುತ್ತಿದ್ದ ಸತ್ಕಾರ್ಯಗಳಲ್ಲಿ ಕೈಜೋಡಿಸುವುದು ಸಾಧ್ಯವಾಗಲಿಲ್ಲ. ಯೋಧನಂತೆ ಮುನ್ನುಗ್ಗುತ್ತಿದ್ದ ನಿವೇದಿತೆಯ ಪ್ರಚಂಡ ಶಕ್ತಿಯೊಂದಿಗೆ, ಅವಳ ಅಭಿಪ್ರಾಯವನ್ನು ಒಪ್ಪಿಕೊಂಡು ಹೆಜ್ಜೆಯಿಡುವುದು ಅವರಿಂದಾಗಲಿಲ್ಲ.

### ಅವನೀಂದ್ರನಾಥ ಠಾಕೂರ್



ಭಾರತೀಯ ಕಲಾರಂಗದ ಪುನರುಜ್ಜೀವನ ಸಾಧಿಸುವ ಉದ್ದೇಶದಿಂದ ನಿವೇದಿತೆಯು ರವೀಂದ್ರನಾಥ ಠಾಕೂರರ ಸೋದರರಾದ ಅವನೀಂದ್ರನಾಥ ಠಾಕೂರರ ಒಡನಾಟವನ್ನು ಸಂಪಾದಿಸಿಕೊಂಡುದನ್ನು ಕೂಡ ಈ ಸಂದರ್ಭದಲ್ಲಿಯೇ ನೆನೆಯಬೇಕು. ಅವನೀಂದ್ರರು ಕೋಲ್ಕತ್ತೆಯ ಕಲಾಶಾಲೆಯ ಪ್ರಾಚಾರ್ಯರಾಗಿದ್ದರು. ಅವರು ಪಾಶ್ಚಾತ್ಯ ಚಿತ್ರಕಲೆಗೆ ಮರುಳಾಗಿ ಅದನ್ನೇ ಅನುಕರಣೆ ಮಾಡುತ್ತಿದ್ದರು. ಅಂತಹ ಸಂಧಿಕಾಲದಲ್ಲಿ ನಿವೇದಿತಾ ಅವನೀಂದ್ರರಿಗೆ ಭಾರತೀಯ ಚಿತ್ರಕಲೆಯ ಉನ್ನತಿಕೆಯನ್ನೂ ಅದರ ಸೌಂದರ್ಯಾತಿಶಯತೆಯ ಒಳನೋಟಗಳನ್ನೂ ಮನವರಿಕೆ ಮಾಡಿಕೊಟ್ಟಳು. ಅದರಿಂದ ಅವನೀಂದ್ರರು ಕಣ್ಣು ತೆರೆದು ತಮ್ಮ ದಿಕ್ಕನ್ನೇ ಬದಲಾಯಿಸಿದರು. ಭಾರತೀಯ ಪರಂಪರೆಗೆ ತಮ್ಮನ್ನು ತೆತ್ತುಕೊಂಡರು. ಆಮೇಲೆ ಅವರು ರಚಿಸಿದ 'ಭಾರತಮಾತಾ' ಚಿತ್ರವನ್ನು ಪ್ರಶಂಸಿಸುತ್ತಾ ''ಭಾರತೀಯ ಚಿತ್ರಕಲೆಯಲ್ಲಿ ಈ ಚಿತ್ರದ ಮೂಲಕ ಒಂದು ಹೊಸಯುಗವೇ ತೆರೆದುಕೊಂಡಿದೆ'' ಎಂದು ಹೊಗಳಿದಳು. 'ಮಾರ್ಡನ್ ರಿವ್ಯೂ' ಪತ್ರಿಕೆಯಲ್ಲಿ ಆ ಚಿತ್ರವನ್ನು ಎತ್ತಿಹಿಡಿಯುವ ಒಂದು ಒಕ್ಕಣೆಯನ್ನೂ ಬರೆದು ಉತ್ಸಾಹ ತುಂಬಿದಳು.

ಅವನೀಂದ್ರನಾಥರು ನಿವೇದಿತಾಳನ್ನು ಕುರಿತು, ''ಭಾರತವನ್ನು ಪ್ರೀತಿಸಿದ ವಿದೇಶೀಯರಲ್ಲಿ ನಿವೇದಿತಾಳಿಗೆ ಉತ್ತುಂಗಸ್ಥಾನ ಸಲ್ಲುತ್ತದೆ'' ಎಂದು ಘೋಷಿಸಿದ್ದಾರೆ. ಸಂಸ್ಕೃತ ಭಾಷೆಯಲ್ಲಿ ಬಾಣ ಎಂಬ ಕವಿಯು 'ಕಾದಂಬರಿ' ಎಂಬ ಅಮೂಲ್ಯವಾದ ಗದ್ಯಕಾವ್ಯವೊಂದನ್ನು ರಚಿಸಿದ್ದಾರೆ. ಅದರಲ್ಲಿ ಬರುವ ಪಾತ್ರಗಳಲ್ಲಿ ಮಹಾಶ್ವೇತೆ ಎಂಬಾಕೆಯೂ ಒಬ್ಬಳು. ಅವಳು ತ್ರಿಲೋಕಸುಂದರಿಯಾಗಿದ್ದಳು. ಅದನ್ನೆಲ್ಲ ಬಾಣನು ಮನೋಜ್ಞವಾಗಿ ಬಣ್ಣಿಸಿದ್ದಾನೆ. ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಅವನೀಂದ್ರರು, ''ಸುಂದರಿ ಎಂದು ನೀವು ಯಾರನ್ನು ಕರೆಯುತ್ತೀರೋ ನನಗೆ ತಿಳಿಯದು. ಆದರೆ ನನ್ನ ದೃಷ್ಟಿಯಲ್ಲಿ ನಿವೇದಿತಾ ಆದರ್ಶ ಸುಂದರಿ. 'ಕಾದಂಬರಿ' ಯಲ್ಲಿ ಮಹಾಶ್ವೇತೆಯ ವರ್ಣನೆಯಿದೆ. ಆ ಚಂದ್ರಮಣಿಯಿಂದ ಅಲಂಕೃತವಾದ ಮೂರ್ತಿಯೇ ಮತ್ತೆ ಅವತರಿಸಿದಂತಿರುವಳು ನಿವೇದಿತಾ. ಅವಳು ಅಮೃತಶಿಲೆಯಿಂದ ಕಡೆದ ತಪಸ್ವಿನಿಯ ಮೂರ್ತಿಯಂತಿದ್ದಳು. ಅದು ಕೇವಲ ದೈಹಿಕ ಸೌಂದರ್ಯವಾಗಿರಲಿಲ್ಲ. ಅವಳ ಆಂತರಿಕ ಸೌಂದರ್ಯವೂ ಕೂಡ ಅವಳ ದೇಹಾದ್ಯಂತ ಹೊರಸೂಸಿ ಅವಳಿಗೊಂದು ದಿವ್ಯಶೋಭೆಯನ್ನು ನೀಡಿತ್ತು'' ಎಂದು ಮೆಚ್ಚಿ ಬರೆದಿದ್ದಾರೆ.

### ನಂದಲಾಲ್ ಬೋಸ್



ಭಾರತೀಯ ಚಿತ್ರಕಲೆಯ ವಿಷಯದಲ್ಲಿ ನಿವೇದಿತಾ ಅಪರಿಮಿತವಾದ ಆಸಕ್ತಿಯನ್ನು ಬೆಳೆಸಿಕೊಂಡಿದ್ದಳು. ಅದರ ಅಂತರಾಳದ ಸೌಂದರ್ಯ ಮೀಮಾಂಸೆಯನ್ನೆಲ್ಲ ಅವಳು ವಿವೇಕಾನಂದರೊಡನೆ ಚರ್ಚಿಸಿ ತಿಳಿದುಕೊಂಡಿದ್ದಳು. ಪಾಶ್ಚಾತ್ಯ ಅನುಕರಣೆಯಿಂದ ಭಾರತೀಯ ಚಿತ್ರಕಲೆಯು ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಬಿಡುತ್ತಿದೆಯಲ್ಲ ಎಂದು ಅವಳು ಕೊರಗುತ್ತಿದ್ದಳು. ಅದರ ಸಂರಕ್ಷಣೆಗಾಗಿ ಅವಳು ಚಿತ್ರಕಲಾಕೋವಿದರ ಒಂದು ಪಡೆಯನ್ನೇ ಕಟ್ಟಿದಳು. ಅವನೀಂದ್ರನಾಥರ ಶಿಷ್ಯರೇ ಆದ ನಂದಲಾಲ್‌ಬೋಸ್, ಅಸಿತಕುಮಾರ ಹಲಧರ್, ಸುರೇಂದ್ರನಾಥ ಗಂಗೂಲಿ ಮುಂತಾದವರು ಆ ಪಡೆಯ ಮುಂಚೂಣಿಯಲ್ಲಿದ್ದರು. ಭಾರತೀಯ ವಿಭೂತಿಗಳ, ದೇವತೆಗಳ ಚಿತ್ರಗಳನ್ನು ಬರೆಯುವಂತೆ ಅವರನ್ನು ನಿವೇದಿತಾ ಉತ್ತೇಜಿಸುತ್ತಿದ್ದಳು.

ಯುವ ಕಲಾವಿದರು ಬರೆದ ಚಿತ್ರಗಳನ್ನು ತಾನು ಕೊಳ್ಳುವುದು, ಮಾರುಕಟ್ಟೆ ದೊರಕಿಸಿಕೊಡುವುದು, ಪತ್ರಿಕೆಗಳ ಮೂಲಕ ಆ ಚಿತ್ರ

ಗಳನ್ನು ಕೊಂಡಾಡಿ ಪ್ರೋತ್ಸಾಹಿಸುವುದು ಮುಂತಾದ ಉಪಕ್ರಮಗಳಿಂದ ನಿವೇದಿತಾ ಆ ಕಲಾವಿದರ ಕಣ್ಮಣಿಯಾದಳು. ''ನೀವು ಸ್ವಾತಂತ್ರ್ಯ ಹೋರಾಟಕ್ಕೆ ದುಮ್ಮಿಕ್ಕಬೇಡಿ. ಭಾರತೀಯ ಚಿತ್ರಕಲೆಯ ಪುನರುಜ್ಜೀವನವು ಸಾಧಿತವಾದರೆ ಅದು ಸ್ವಾತಂತ್ರ್ಯಚಳುವಳಿಗೆ ಪೋಷಕವಾಗುತ್ತದೆ'' ಎಂದು ನಿವೇದಿತಾ ಅವರಿಗೆ ತಿಳಿಯಹೇಳುತ್ತಿದ್ದಳು. ಅಜಂತಾದಲ್ಲಿರುವ ಪ್ರಾಚೀನ ಚಿತ್ರಕಲೆಯ ಸೌಂದರ್ಯಾತಿಶಯತೆಯನ್ನು ಅಧ್ಯಯನ ಮಾಡಿಕೊಂಡು ಬರಲೆಂದು ತನ್ನ ಸ್ವಂತ ಖರ್ಚಿನಲ್ಲಿ ಆ ಯುವ ಕಲಾವಿದರನ್ನು ಅಲ್ಲಿಗೆ ಕಳುಹಿಸಿದ್ದಳು. ''ನಿವೇದಿತಾಳಿಂದ ನಾನು ಪಡೆದ ಪ್ರೋತ್ಸಾಹವನ್ನು ಬಣ್ಣಿಸಲು ನನ್ನಲ್ಲಿ ಮಾತುಗಳಿಲ್ಲ. ಅವಳು ನಮ್ಮ ಪಾಲಿನ ಮಾರ್ಗದರ್ಶಿ ದೇವತೆಯಾಗಿದ್ದಳು'' ಎಂದು ನೆನೆದಿದ್ದಾರೆ ನಂದಲಾಲ್ ಬೋಸ್.


### ಆನಂದಕುಮಾರ ಸ್ವಾಮಿ

ಸ್ವಾಮಿ ವಿವೇಕಾನಂದರ ಕಾಲದಲ್ಲಿ ಬಂಗಾಳದಲ್ಲಿ ಭಾರತೀಯ ಚಿತ್ರಕಲೆಯನ್ನು ಕುರಿತಂತೆ ಒಂದು ಆಂದೋಳನವೇ ರೂಪುತಳೆದು, ನಿವೇದಿತಾ ಅದರ ದಂಡನಾಯಕಿಯಾಗಿದ್ದಳು ಎಂದು ಹೇಳಿದರೆ



ತಪ್ಪಾಗುವುದಿಲ್ಲ. ಆನಂದ ಕುಮಾರ ಸ್ವಾಮಿಗಳು ಅಂದಿನ ಕಲಾ ವಿಮರ್ಶಕರಲ್ಲಿ ಅಗ್ರಗಣ್ಯರಾಗಿದ್ದರು. ನಿವೇದಿತೆಯು ಅವರನ್ನು ಕೂಡ ತನ್ನ ಚಳುವಳಿಯ ತೆಕ್ಕೆಗೆ ತೆಗೆದುಕೊಂಡಳು. ತನ್ನ ವಿಚಾರಗಳಿಂದ ಅವರು ಪ್ರಭಾವಿತರಾಗುವಂತೆ ಮಾಡಿದಳು. ಅವರು ಬರೆದ ಕಲಾ ಸಂಬಂಧಿಯಾದ ಗ್ರಂಥವನ್ನು ನಿವೇದಿತಾ ಪರಿಪರಿಯಾಗಿ ಮೆಚ್ಚಿಕೊಂಡಳು. 'ಮಾರ್ಡನ್‌ರಿವ್ಯೂ' ಮುಂತಾದ ಪತ್ರಿಕೆಗಳಲ್ಲಿ ಆ ಗ್ರಂಥವನ್ನು ಮೆಚ್ಚಿ ವಿಮರ್ಶಿಸುತ್ತ ಆನಂದಕುಮಾರ ಸ್ವಾಮಿಗಳು ಕೀರ್ತಿವಂತರಾಗುವಂತೆ ಮಾಡಿದಳು. ಮೈಸೂರು ಅರಸರ ಪ್ರೋತ್ಸಾಹದಿಂದ ನಮ್ಮಲ್ಲಿ ಮೈಸೂರು ಶೈಲಿ, ತಂಜಾವೂರು ಶೈಲಿ ಎಂಬ ಚಿತ್ರಕಲಾಶೈಲಿಗಳು ಗಟ್ಟಿಗೊಂಡಂತೆ, ಅಂದು ಬಂಗಾಳದಲ್ಲಿ ನಿವೇದಿತೆಯ ಪರಿಶ್ರಮದಿಂದಾಗಿ 'ಕೋಲ್ಕತ್ತಾ ಶೈಲಿ' ಎಂಬೊಂದು ನೂತನ ಚಿತ್ರಕಲೆಯ ಆವಿರ್ಭಾವವಾಯಿತು.

### ಸುಬ್ರಹ್ಮಣ್ಯ ಭಾರತಿ



ತಮಿಳುನಾಡಿನ ಪ್ರಸಿದ್ಧ ಕವಿ ಮಹೋದಯರಾದ ಸುಬ್ರಹ್ಮಣ್ಯ ಭಾರತಿಯವರು ಸೋದರಿ ನಿವೇದಿತಾಳ ಪ್ರಭಾವಕ್ಕೆ ಒಳಗಾದುದು ಒಂದು ಅಪೂರ್ವ ಘಟನೆಯೆಂದೇ ಹೇಳಬೇಕು. ೧೯೦೬ರಲ್ಲಿ ಭಾರತಿಯವರು ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಲು ಕೋಲ್ಕತ್ತೆಗೆ ಬಂದಿದ್ದರು. ಆ ಹೊತ್ತಿನಲ್ಲಿ ನಿವೇದಿತೆಯೂ ಅಲ್ಲಿಗೆ ಬಂದಿಳಿದು ಭಾರತಿಯವರೊಡನೆ ಮಾತುಕತೆಯಾಡಿದಳು. ಮೊದಲ ಭೇಟಿಯಲ್ಲಿಯೇ ಭಾರತಿಯವರು ನಿವೇದಿತಾಳಿಗೆ ಶರಣಾಗಿ, ಅವಳೊಂದು 'ಶಕ್ತಿಕೇಂದ್ರ' ಎಂಬುದನ್ನು ಅರ್ಥಮಾಡಿಕೊಂಡುಬಿಟ್ಟರು. ಆ ಹೊತ್ತಿನಲ್ಲಿ ನಿವೇದಿತೆಯು ''ನಿಮಗೆ ಮದುವೆಯಾಗಿದೆಯೆ?'' ಎಂದು ಕೇಳಿದಳು. ಭಾರತಿಯವರು ''ಆಗಿದೆ, ಒಂದು ಮಗುವೂ ಇದೆ' ಎಂದು ಹೇಳಿದರು. ಆಗ ನಿವೇದಿತೆಯು ''ಹಾಗಾದರೆ ನಿಮ್ಮ ಅರ್ಧಾಂಗಿಯನ್ನೇಕೆ ಕರೆತರಲಿಲ್ಲ?'' ಎಂದು ಕೇಳಿದಳು. ಅದಕ್ಕೆ ಭಾರತಿಯವರು, ''ಮಡದಿಯನ್ನು ಹಾಗೆಲ್ಲ ಸಭೆಸಮಾರಂಭಗಳಿಗೆ ಕರೆತರುವ ಕ್ರಮ ನಮ್ಮಲ್ಲಿಲ್ಲ'' ಎಂದರು. ಆ ಮಾತನ್ನು ಕೇಳಿ ನಿವೇದಿತಾ ಕೋಪೋದ್ರಿಕ್ತೆಯಾದಳು. ''ರಾಷ್ಟ್ರದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಂದಿಯನ್ನು ನೀವು ಕತ್ತಲೆಯಲ್ಲಿಯೇ ಇಟ್ಟರೆ, ನಾವು ಬ್ರಿಟಿಷರ ಗುಲಾಮಗಿರಿಯಿಂದ ಪಾರಾಗುವುದಾದರೂ ಹೇಗೆ! ಸ್ತ್ರೀಯರನ್ನು ನಿಮಗೆ ಸಮಾನಸ್ಕಂಧರೆಂದು ಕಾಣಲಾಗದಿದ್ದರೆ ನೀವು ವಿದ್ಯಾವಂತರಾಗಿ ತಾನೆ ಏನು ಪ್ರಯೋಜನ! ಸ್ತ್ರೀಯರೆಂದರೆ ಅವರು ದೇವಲೋಕದಿಂದ ಇಳಿದು ಬಂದ ದೇವಕನ್ಯೆಯರೆಂದು ಅವರನ್ನು ನಿಮ್ಮ ಹೃದಯಸಿಂಹಾಸನದಲ್ಲಿ ಕೂರಿಸಿಕೊಳ್ಳಬೇಡವೇ! 'ಇದು ನನ್ನ ಕೈ' ಎಂದು ನೀವು ನಿಮ್ಮ ತೋಳನ್ನು ಎತ್ತಿಹಿಡಿಯುವಂತೆ, 'ಇವಳು ನನ್ನವಳು' ಎಂದು ಸ್ತ್ರೀಯರನ್ನೂ ಗೌರವದಿಂದ ಮೇಲೆತ್ತಿ ಹಿಡಿಯಬೇಡವೆ?'' ಎಂದು ದಬಾಯಿಸಿ ಕೇಳಿದಳು.


ಆ ಸಿಂಹವಾಣಿಯನ್ನು ಆಲಿಸುತ್ತಿದ್ದಂತೆಯೇ ಭಾರತಿಯವರು ಭಾವೋದ್ವೇಗದಿಂದ ಮೂಕರಾಗಿಬಿಟ್ಟರು. ''ನನ್ನನ್ನು ಕ್ಷಮಿಸಿ, ನೀವು ಆಡಿದ ಒಂದೊಂದೂ ಮಾತು ನನ್ನ ಹೃದಯಾಂತರಾಳವನ್ನು ಹೊಕ್ಕಿದೆ. ನಿಮ್ಮ ಉಪದೇಶವನ್ನು ಶಿರಸಾವಹಿಸಿ ಪಾಲಿಸುತ್ತೇನೆ'' ಎಂದು ಅರಿಕೆ ಮಾಡಿಕೊಂಡರು. ಅವರನ್ನು ಬೀಳ್ಕೊಡುವ ಹೊತ್ತಿನಲ್ಲಿ ನಿವೇದಿತೆಯು, ''ವತ್ಸ, ಜಾತಿಮತಕುಲಗೋತ್ರಗಳ ಅನಗತ್ಯ ಕಟ್ಟುಗಳನ್ನು ಕಿತ್ತೊಗೆದುಬಿಡು. ಮೇಲುಕೀಳುಗಳೆಂಬ ಅನಾಗರಿಕ ಭಾವನೆಗಳಿಗೆ ತಿಲಾಂಜಲಿ ಕೊಟ್ಟುಬಿಡು. ನಿನ್ನ ಹೃದಯವು ಪ್ರೇಮೋನ್ಮಾದದಿಂದಲೂ ದೇಶಭಕ್ತಿಯಿಂದಲೂ ಉದ್ದೀಪನಗೊಳ್ಳಲಿ. ಮುಂದಕ್ಕೆ ನೀನು ಅಜರಾಮರವಾದ ಕೀರ್ತಿಗೆ ಪಾತ್ರನಾಗುತ್ತೀಯೆ'' ಎಂದು ಭಾವಭರಿತಳಾಗಿ ಆಶೀರ್ವದಿಸಿದಳು. ಮುಂದಕ್ಕೆ ಆ ಭವಿಷ್ಯವಾಣಿ ನಿಜವೂ ಆಯಿತು.

ಚೆನ್ನೈಗೆ ಮರಳಿ ಬಂದ ಮೇಲೆ ಸುಬ್ರಹ್ಮಣ್ಯಭಾರತಿಯವರು ನಿಜವಾದ ಅರ್ಥದಲ್ಲಿ 'ದ್ವಿಜ'ರಾಗಿಬಿಟ್ಟರು. ಮರುಹುಟ್ಟು ಪಡೆದು ಹೊಸ ಮನುಷ್ಯರಾಗಿಬಿಟ್ಟರು. ತಾವು ಹೋಗುತ್ತಿದ್ದ ಸಭೆಸಮಾರಂಭಗಳಿಗೆ ತಮ್ಮ ಮಡದಿಯನ್ನು ಕರೆದೊಯ್ಯುತ್ತಾ ಅರ್ಧನಾರೀಶ್ವರರಾಗಿಬಿಟ್ಟರು. ಅಷ್ಟು ಮಾತ್ರವಲ್ಲದೆ, ಬೀದಿಯಲ್ಲಿ ನಡೆದು ಹೋಗುವಾಗಲೂ, ಟೀಕೆಗೆ ಲೆಕ್ಕಿಸದೆ, ಮಡದಿಯ ಕೈ ಕೈಹಿಡಿದು ತೂಗಾಡಿಸುತ್ತ ಉಲ್ಲಾಸದಿಂದ ಸಾಗುತ್ತಿದ್ದರು. ಬ್ರಾಹ್ಮಣಿಕೆಯ ಮಡಿವಂತಿಕೆಯನ್ನು ಬದಿಗಿಟ್ಟು ಎಲ್ಲರೊಡನೆ ಕಲೆಯುತ್ತ, ಸಹಪಂಕ್ತಿಭೋಜನ

ಮಾಡುತ್ತ ಎಲ್ಲರೊಳಗೊಂದಾಗಿ ಬಿಟ್ಟರು. ಅಷ್ಟು ಮಾತ್ರವಲ್ಲದೆ ಅಪ್ರತಿಮ ರಾಷ್ಟ್ರಭಕ್ತರಾಗಿ ಕ್ರಾಂತಿಕಾರರ ದೇಶಭಕ್ತಿಗೀತೆಗಳನ್ನು ಬರೆದು ಹಾಡುತ್ತ ಸ್ವಾತಂತ್ರ್ಯ ಚಳುವಳಿಗೆ ಧುಮ್ಮಿಕ್ಕಿದರು.

ಸುಬ್ರಹ್ಮಣ್ಯಭಾರತಿಯವರು ನಿವೇದಿತಾಳಿಂದ ತಾವು ಪಡೆದ ಪ್ರೇರಣೆಯ ದ್ಯೋತಕವಾಗಿ '**ಜನ್ಮಭೂಮಿ**' ಮತ್ತು '**ಸ್ವದೇಶಿ ಗೀತೆಗಳು**' ಎಂಬೆರಡು ಗೀತಸಂಕಲನಗಳನ್ನು ನಿವೇದಿತಾಳಿಗೆ ಸಮರ್ಪಿಸಿದ್ದಾರೆ. ''ಒಂದೇ ಒಂದು ನೋಟದಿಂದ, ಕ್ಷಣಮಾತ್ರದಲ್ಲಿ ನನಗೆ ಮಾತೃಭೂಮಿಯ ಸೇವಾದೀಕ್ಷೆ ನೀಡಿದ, ಸದ್ಗುರು ವಿವೇಕಾನಂದರ 'ಧರ್ಮಪುತ್ರಿ'ಯಾದ ನಿವೇದಿತಾಳ ಚರಣಕಮಲಗಳಲ್ಲಿ ಈ ಕೃತಿಯನ್ನು ಸಮರ್ಪಿಸುತ್ತಿದ್ದೇನೆ'' ಎಂದು ಅದರಲ್ಲಿ ಬರೆದಿದ್ದಾರೆ. ಸ್ವದೇಶಗೀತೆಗಳನ್ನು ಸಮರ್ಪಿಸುತ್ತ ''ಶ್ರೀಕೃಷ್ಣನು ಅರ್ಜುನನಿಗೆ ತನ್ನ ವಿಶ್ವರೂಪದರ್ಶನ ಮಾಡಿಸಿ, ಅವನು ಕರ್ತವ್ಯಸುಮುಖನಾಗುವಂತೆ ಮಾಡಿದಂತೆಯೇ ನನಗೆ ಗುರುಸ್ಥಾನದಲ್ಲಿ ನಿಂತು ನಿವೇದಿತಾ ನನ್ನಲ್ಲಿ ನೈಜವಾದ ರಾಷ್ಟ್ರಭಕ್ತಿಯ ಕಿಚ್ಚು ಜಾಗೃತವಾಗುವಂತೆ ಮಾಡಿದರು'' ಎಂದು ನಿವೇದಿಸಿಕೊಂಡಿದ್ದಾರೆ.

### ದಿನೇಶಚಂದ್ರ ಸೇನ್



ಬಂಗಾಳದ ಸಾಹಿತಿಗಳ ಸಾಲಿನಲ್ಲಿ ದಿನೇಶಚಂದ್ರ ಸೇನ್ ಕೂಡ ಹೆಚ್ಚಿನ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರು ನಿವೇದಿತಾಳನ್ನು ತುಂಬಾ ಮೆಚ್ಚಿಕೊಳ್ಳುತ್ತಿದ್ದರು. ಸಾಹಿತ್ಯವಿರಲಿ, ರಾಜಕಾರಣವೇ ಇರಲಿ ನಿವೇದಿತಾ ಕ್ರಾಂತಿಕಾರಿ ಧೋರಣೆಗಳನ್ನೇ ಇಷ್ಟಪಡುತ್ತಿದ್ದಳು. ಆದರೆ ದಿನೇಶಚಂದ್ರರು ಸೌಮ್ಯವಾದಿಯಾಗಿ ದ್ದರು. ಹೋರಾಟ ಕಾದಾಟಗಳಿಗೂ ಅವರಿಗೂ ಎಣ್ಣೆಸೀಗೆಕಾಯಿ. ಅಂಜುಕುಳಿ ಸ್ವಭಾವ ಅವರದಾಗಿತ್ತು. ''ಈ ಅಂಜುಬುರುಕು ತನವನ್ನು ನೀನು ತ್ಯಜಿಸಬೇಕು ಸೇನ್, ಧೀರ ಸೇನಾನಿಯಾಗಬೇಕು ನೋಡು'' ಎಂದು ನಿವೇದಿತಾ ಆಗಾಗ ಹಂಗಿಸಿ ಹೇಳುತ್ತಿದ್ದಳು. ಹಾಗೆ ಹಂಗಿಸಿದರೂ ದಿನೇಶಚಂದ್ರರು ಬೇಸರಿಸಿಕೊಳ್ಳುತ್ತಿರಲಿಲ್ಲ; ''ಈ ಮಹಿಳೆ ಸತ್ಯವನ್ನೇ ನುಡಿಯುತ್ತಿದ್ದಾಳಲ್ಲವೆ, ನನ್ನ ಹಿತವನ್ನೇ ಬಯಸುತ್ತಿದ್ದಾಳಲ್ಲವೆ'' ಎಂದು ಶಾಂತಚಿತ್ತರಾಗಿಯೇ ಅದನ್ನೆಲ್ಲ ಸ್ವೀಕರಿಸುತ್ತಿದ್ದರು.

ಒಂದು ದಿನ ನಿವೇದಿತಾ ದಿನೇಶಚಂದ್ರರೊಡಗೂಡಿ ಬಾಗ್ ಬಜಾರ್ ಮಾರ್ಗವಾಗಿ ನಡೆಯುತ್ತ ಗಂಗಾನದಿಯ ತೀರಕ್ಕೆ ಹೋಗುತ್ತಿದ್ದಳು. ಅವರೊಡನೆ ಶ್ರೀರಾಮಕೃಷ್ಣ ಮಠದ ಗಣೇನ್ ಮಹಾರಾಜರೂ ಇದ್ದರು. ಮುಂದೆ ಮುಂದೆ ದಿನೇಶರು, ಅವರ ಹಿಂದೆ ನಿವೇದಿತಾ, ಅವರ ಹಿಂದೆ ಗಣೇನ್ ಮಹಾರಾಜ್ – ಹೀಗೆ ಅವರ ನಡಿಗೆ ಸಾಗುತ್ತಿತ್ತು. ಆಗ ಇದ್ದಕ್ಕಿದ್ದಂತೆ ಕೊಬ್ಬಿದ ಗೂಳಿಯೊಂದು ಗುಟುರುಹಾಕುತ್ತ ಅವರತ್ತಲೇ ನುಗ್ಗಿ ಬಂತು. ಮುಂಚೂಣಿಯಲ್ಲಿಯೇ ಇದ್ದ ದಿನೇಶರು ಸತ್ತೆನೋ ಕೆಟ್ಟೆನೋ ಎಂದು ಕಾಲಿಗೆ ಬುದ್ಧಿ ಹೇಳಿ ಎಲ್ಲಿಯೋ ಅಡಗಿ ಕುಳಿತರು. ಒಡನೆಯೇ ಗಣೇನ್ ಮಹಾರಾಜರು ನಿವೇದಿತಾಳ ಮುಂದೆ ನುಗ್ಗಿ ನಿಂತು, ಬೊಬ್ಬೆ ಹಾಕಿ ಆ ಗೂಳಿಯನ್ನು ಗದರಿಸಿ ಓಡಿಸಿ ನಿವೇದಿತಾಳನ್ನು ಸಂತೈಸಿದರು. ಆಮೇಲೆ ದಿನೇಶಚಂದ್ರರು ತಮ್ಮ ಅಡಗುತಾಣದಿಂದ ಮೆಲ್ಲನೆ ಹೊರಬಂದರು.

ಆಗ ನಿವೇದಿತಾಳ ಅಂಗಾಲಕಿಚ್ಚು ನೆತ್ತಿಗೇರಿತು. ''ಏನಯ್ಯಾ ಮಹಾಶಯ, ಗಂಡಸಾಗಿ ನಿನಗೆ ನಾಚಿಕೆಯಾಗಬೇಡವೇ, ನಿನ್ನ ಹೇಡಿತನದಿಂದ ನೀನಿಂದು ಪುರುಷ ಕುಲಕ್ಕೇ ಅಪಮಾನ ಮಾಡಿಬಿಟ್ಟೆಯಲ್ಲಾ, ಅಸಹಾಯದ ಹೆಣ್ಣೊಬ್ಬಳನ್ನು ನಡುಬೀದಿಯಲ್ಲಿ ಬಿಟ್ಟು ನಿನ್ನ ಪಾಡನ್ನು ನೀನು ನೋಡಿಕೊಂಡೆಯಲ್ಲ?'' ಎಂದು ನಿಂದಿಸಿ ನುಡಿದಳು. ದಿನೇಶರು ಏನೊಂದು ಹೇಳಲಾರದೆ ತಲೆ ತಗ್ಗಿಸಿ ಮುನ್ನಡೆದರು. ಇಷ್ಟೆಲ್ಲ ಆದರೂ ನಿವೇದಿತಾ ದಿನೇಶರನ್ನು ಅಕ್ಕರೆಯಿಂದಲೇ ನಡೆಸಿಕೊಳ್ಳುತ್ತಿದ್ದಳು. ಅವನೊಬ್ಬ ಪ್ರಾಮಾಣಿಕ ದೇಶಭಕ್ತ, ಸಾಹಿತ್ಯ ನಿರ್ಮಾಪಕ ಎಂಬುದೇ ಆ ಪ್ರೀತಿಗೆ ಕಾರಣವಾಗಿತ್ತು.

ಒಂದು ದಿನ ದಿನೇಶಚಂದ್ರರು ನಿವೇದಿತಾಳ ಸಮ್ಮುಖದಲ್ಲಿ '**ಶೂನ್ಯಪುರಾಣ**' ಎಂಬ ಗ್ರಂಥದಿಂದ ಒಂದು ಶ್ಲೋಕವನ್ನು ಪಠನ ಮಾಡಿದರು. ''ಹೇ ಶಿವನೇ, ನೀನೇಕೆ ಭಿಕ್ಷೆ ಬೇಡಬೇಕು? ಅದು ಹೀನವೃತ್ತಿಯಲ್ಲವೆ? ನೀನೇ ವ್ಯವಸಾಯ ಮಾಡಿ, ನಿನಗೆ ಬೇಕಾದ ಅನ್ನಾಹಾರಗಳನ್ನು ಬೆಳೆದುಕೊಳ್ಳಬಾರದೆ? ಹೇ ಶಿವನೇ, ನೀನೆಷ್ಟು ಕಾಲ ಹೀಗೆಯೇ ಬೆತ್ತಲೆಯಾಗಿ ಹೊಡಬಾಳು ಹತ್ತುತ್ತೀಯೆ, ಆ ಹುಲಿಚರ್ಮವಷ್ಟೇ ನಿನಗೆ ಸಾಕೆ? ನೀನೇ ಹತ್ತಿಬೆಳೆದು, ನೂಲು ತೆಗೆದು ಬಟ್ಟೆ ನೇಯ್ದು ಮೈ ಮುಚ್ಚಿಕೊಳ್ಳಬಾರದೆ? ಎಂತಹ ದುರ್ಗತಿಗೆ ಈಡಾಗಿದ್ದೀಯೆ ತಂದೆ'' ಎಂಬುದು ಆ ಶ್ಲೋಕದ ತಾತ್ಪರ್ಯವಾಗಿತ್ತು. ಆ ಶ್ಲೋಕವನ್ನು ಆಲಿಸಿದೊಡನೆಯೆ ನಿವೇದಿತಾ,'ಅದ್ಭುತ, ಅದ್ಭುತ' ಎನ್ನುತ್ತ ಆನಂದಾತಿರೇಕದಿಂದ ಕೈಚಪ್ಪಾಳೆ ತಟ್ಟುತ್ತ ಪುಟ್ಟ ಬಾಲಿಕೆಯಂತೆ ಕುಣಿದಾಡಿಬಿಟ್ಟಳು.

ಆಗ ಸೇನರು, ''ಈ ಶ್ಲೋಕದಲ್ಲಿ ನೀನು ಅದೇನು ಅದ್ಭುತವನ್ನು ಕಂಡೆಯಕ್ಕ, ನನಗೂ ಸ್ವಲ್ಪ ಬಿಡಿಸಿ ಹೇಳು'' ಎಂದು ಕೋರಿಕೊಂಡರು. ಆಗ ನಿವೇದಿತಾ, ''ಸಾಮಾನ್ಯ ಭಕ್ತರಾದರೋ ನನಗೆ ಆಯುಷ್ಯ ಕೊಡು, ಆರೋಗ್ಯ ಕೊಡು, ಧನಕನಕ ವಸ್ತುವಾಹನಗಳನ್ನು ಕೊಡು ಎಂದೇ ಬೇಡಿಕೊಳ್ಳುತ್ತಾರೆ. ಆದರೆ ಈ ಶ್ಲೋಕದಲ್ಲಿರುವ ಭಕ್ತನು ತನಗಾಗಿ ಏನನ್ನೂ ಯಾಚಿಸದೆ, ತನ್ನ ಆರಾಧ್ಯ ದೇವನ ಹಿತವನ್ನೇ ಕೋರುತ್ತಿದ್ದಾನೆ. ತನ್ನ ದೇವರು ಸುಖವಾಗಿರಬೇಕೆಂಬುದನ್ನೇ ಬಯಸುತ್ತಿದ್ದಾನೆ. ಇದು ಅದ್ಭುತವಾದ ವಿಚಾರವಲ್ಲವೆ?'' ಎಂದು ವಿವರಿಸಿದಳು. ಆ ವಿವರಣೆ ಸೇನರಿಗೂ ಪ್ರಿಯವಾಯಿತು.

ದಿನೇಶಚಂದ್ರರು ಬಂಗಾಳಿಭಾಷೆ ಮತ್ತು ಬಂಗಾಳಿ ಸಾಹಿತ್ಯ ಚರಿತ್ರೆಯನ್ನು ಕುರಿತು ಆಂಗ್ಲಭಾಷೆಯಲ್ಲಿ ದೊಡ್ಡ ಗ್ರಂಥವೊಂದನ್ನು

ರಚಿಸಿ, ತಮ್ಮ ಹಸ್ತಪ್ರತಿಯನ್ನು ಅವಲೋಕಿಸಬೇಕೆಂದು ಪ್ರಾರ್ಥಿಸಿ ಅದನ್ನು ನಿವೇದಿತಾಳಿಗೆ ಒಪ್ಪಿಸಿದರು. ನಿವೇದಿತಾ ದಿನೇಶಚಂದ್ರರನ್ನೂ ಕೂರಿಸಿಕೊಂಡು ಸಮಯಸಿಕ್ಕಾಗಲೆಲ್ಲ ಅದನ್ನು ಅಮೂಲಾಗ್ರವಾಗಿ ಓದುತ್ತ, ಅಲ್ಲಲ್ಲಿಯೇ ಲೋಪದೋಷಗಳನ್ನು ಸರಿಪಡಿಸಿದಳು. ಆಗಾಗ ಬಿಸಿಬಿಸಿ ಚರ್ಚೆಯೂ ನಡೆದು, ಹಿತಕರವಾದ ತೀರ್ಮಾನಕ್ಕೆ ಬರುತ್ತಿದ್ದರು. ಭಾರತದ ಘನತೆಗೆ ಕುಂದುಬರುವ ಯಾವ ಸಂಗತಿಯೂ ಆ ಗ್ರಂಥದಲ್ಲಿರಬಾರದು ಎಂಬುದೇ ಅಂತಹ ತೀವ್ರ ಪರಿಶೋಧನೆಗೆ ಕಾರಣವಾಗಿತ್ತು. ಆ ಪರಿಶೋಧನೆಗೆ ಒಂದು ವರ್ಷವೇ ಹಿಡಿಯಿತು. ''ನಾನು ಮಾಡಿರುವ ಸಹಾಯವನ್ನು ಯಾರಿಗೂ ತಿಳಿಸಬಾರದು'' ಎಂದು ನಿವೇದಿತಾ ತಾಕೀತು ಮಾಡಿದ್ದಳು. ''ನಾನು ಮಾಡುತ್ತಿರುವ ಕಾರ್ಯವು ಪರಮಾತ್ಮನಿಗೆ ಪ್ರಿಯವಾಗಲಿ ಎಂದು ಈಶ್ವರಾರ್ಪಣ ಬುದ್ಧಿಯಿಂದ ಮಾಡುವುದು 'ಕರ್ಮಯೋಗ'ವೆನಿಸುತ್ತದೆ. ಭಗವದ್ಗೀತೆಯಲ್ಲಿ ನಾನು ಓದಿದ್ದ ನಿಷ್ಕಾಮಕರ್ಮಯೋಗಕ್ಕೊಂದು ಆದರ್ಶವನ್ನು ನಾನು ನಿವೇದಿತಾಳಲ್ಲಿ ಕಂಡೆ'' ಎಂದು ನಿವೇದಿತಾಳ ತರುವಾಯದ ಕಾಲದಲ್ಲಿ ಸೇನರು ಸ್ಮರಿಸಿಕೊಂಡಿದ್ದಾರೆ.

### ರಮೇಶಚಂದ್ರ ದತ್ತ



ಸೋದರಿ ನಿವೇದಿತಾ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಕುರಿತಂತೆಯೂ ಚಿಂತನೆ ನಡೆಸುತ್ತಿದ್ದಳು. ಭಾರತೀಯ ಅರ್ಥಶಾಸ್ತ್ರದ ವಿಷಯದಲ್ಲಿದ್ದ ಅವಳ ಕಾಳಜಿಯೇ ಕಾರಣವಾಗಿ ರಮೇಶಚಂದ್ರರಂತಹ ಅರ್ಥಶಾಸ್ತ್ರಜ್ಞರು ನಿವೇದಿತಾಳಿಗೆ ಆಪ್ತರಾದರು. ಬಂಗಾಳಿ ಮತ್ತು ಸಂಸ್ಕೃತ ಭಾಷೆಗಳನ್ನು ಕಲಿಯಲು ದತ್ತರು ನಿವೇದಿತಾಳಿಗೆ ಒತ್ತಾಸೆ ನೀಡಿದರು. ರಮೇಶಚಂದ್ರರಿಗೆ ನಿವೇದಿತಾ 'ಧರ್ಮಪುತ್ರಿ'ಯಾದರೆ, ರಮೇಶಚಂದ್ರರು ನಿವೇದಿತಾಳಿಗೆ 'ಧರ್ಮಪಿತಾ' ಆಗಿದ್ದರು. ''ನಿಮ್ಮ ಅರ್ಥಶಾಸ್ತ್ರದ ಚಿಂತನೆಗಳಲ್ಲಿ ನೀವು ಭಾರತೀಯತೆಗೆ ಮಹತ್ತ್ವ ಕೊಡಬೇಕು ತಂದೆ'' ಎಂದು ಅವಳು ಒತ್ತಾಯಿಸಿ ಹೇಳುತ್ತಿದ್ದಳು.

ಭಾರತೀಯ ಸಂಸ್ಕೃತಿಯ ಹಿರಿಮೆಗರಿಮೆಗಳನ್ನು ಕುರಿತಂತೆ ನಿವೇದಿತಾ ವಿವಿಧ ಪತ್ರಿಕೆಗಳಿಗೆ ಬರೆಯುತ್ತಿದ್ದ ಲೇಖನಗಳನ್ನು ರಮೇಶಚಂದ್ರ ದತ್ತರು ಬಹುವಾಗಿ ಮೆಚ್ಚಿ ಬೆನ್ನುತಟ್ಟುತ್ತಿದ್ದರು. ''ಲೇಖನಗಳನ್ನು ನೀನು ಬರೆಯುವುದೇನೋ ಸರಿ, ಆದರೆ ಈ ವಿಚಾರವಾಗಿ ನೀನು ಇಡಿಯಾಗಿ ಒಂದು ಗ್ರಂಥವನ್ನು ಏಕೆ ಬರೆಯಬಾರದು?'' ಎಂದು ದತ್ತರು ನಿವೇದಿತೆಯನ್ನು ಹುರಿದುಂಬಿಸಿದರು. ಅವರ ಉತ್ತೇಜನವೇ ಕಾರಣವಾಗಿ ನಿವೇದಿತಾ '**ದಿ ವೆಬ್ ಆಫ್ ಇಂಡಿಯನ್ ಲೈಫ್**' ಎಂಬ ಗ್ರಂಥವನ್ನು ಹೊರತಂದಳು. ಆ ಗ್ರಂಥದ ಪೀಠಿಕೆಯಲ್ಲಿ ನಿವೇದಿತಾ, ದತ್ತರಿಂದ ತನಗೆ ಲಭಿಸಿದ ಪ್ರೋತ್ಸಾಹವನ್ನು ಮನಸಾರೆ ಕೊಂಡಾಡಿದ್ದಾಳೆ.

### ರಮಾನಂದ ಚಟ್ಟೋಪಾಧ್ಯಾಯ



ನಿವೇದಿತಾ ತನ್ನದೇ ಆದ ಪತ್ರಿಕೆಯೊಂದನ್ನು ಹೊರತರಬೇಕು ಎಂದು ಹಾತೊರೆಯುತ್ತಿದ್ದಳು. ಆದರೆ ವಿವಿಧ ಕಾರ್ಯಗಳ ಒತ್ತಡದಿಂದ ಅದು ಸಾಧ್ಯವಾಗಲಿಲ್ಲ. ಆದರೆ ಪತ್ರಿಕೋದ್ಯಮದಲ್ಲಿ ತೊಡಗಿರುವವರನ್ನು ರಾಷ್ಟ್ರ ಹಿತಕ್ಕಾಗಿ ಹುರಿದುಂಬಿಸುತ್ತಿದ್ದಳು. ಹಾಗೆ ನಿವೇದಿತಾಳಿಂದ ಪ್ರೋತ್ಸಾಹಿತರಾದ ಬಂಗಾಳದ ಪತ್ರಿಕೋದ್ಯಮಿಗಳಲ್ಲಿ ರಮಾನಂದ ಚಟ್ಟೋಪಾಧ್ಯಾಯರು ಪ್ರಮುಖರೆಂದು ಹೇಳಬಹುದು. ಅವರು '**ಪ್ರವಾಸಿ**' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಒಂದು ದಿನ ನಿವೇದಿತಾ ರಮಾನಂದರೊಡನೆ ಮಾತುಕತೆಯಾಡುತ್ತ, ''ನೀವು ಅತ್ಯಂತ ಪ್ರತಿಭಾಸಂಪನ್ನರು, ಮೇಧಾವಿಗಳು. ನಿಮ್ಮ ಪತ್ರಿಕೋದ್ಯಮ ಪ್ರತಿಭೆಯು ಬಂಗಾಳಿ ಭಾಷೆಗಷ್ಟೇ ಸೀಮಿತವಾಗಬಾರದು. ನೀವು ಆಂಗ್ಲಭಾಷೆಯಲ್ಲೂ ಒಂದು ಪತ್ರಿಕೆ ಹೊರತರಬೇಕು. ಆಗ ನಿಮ್ಮ ಕೀರ್ತಿ ಭಾರತದಾದ್ಯಂತ ಪಸರಿಸುತ್ತದೆ'' ಎಂದು ಪ್ರೋತ್ಸಾಹದ ನುಡಿಗಳನ್ನಾಡಿದಳು. ಆ ಪ್ರೋತ್ಸಾಹವು ವ್ಯರ್ಥವಾಗಲಿಲ್ಲ.

ನಿವೇದಿತಾಳ ಮಾತುಗಳಿಂದ ಉತ್ಸಾಹಗೊಂಡು ರಮಾನಂದರು ಕೆಲವೇ ದಿನಗಳಲ್ಲಿ '**ದಿ ಮಾಡರ್ನ್ ರಿವ್ಯೂ**' ಎಂಬ ಆಂಗ್ಲಪತ್ರಿಕೆಯೊಂದನ್ನು ಹೊರಹಾಕಿಯೇಬಿಟ್ಟರು. ನಿವೇದಿತಾ ತಾನೂ ಅದರಲ್ಲಿ ಲೇಖನಗಳನ್ನು ಬರೆದು ಅದರ ಕಾಂತಿಯನ್ನು ಹೆಚ್ಚಿಸಿದಳು. ಅವಳ ಪ್ರೇರಣೆಯಂತೆ ಆ ಪತ್ರಿಕೆ ಭಾರತೀಯ ಚಿತ್ರಕಲೆಯ ಪುನರುತ್ಥಾನ ಕಾರ್ಯವನ್ನು ಶಕ್ತಿಮೀರಿ ಮಾಡಿತು. ನಿವೇದಿತಾ ಅದರ ಲೋಪದೋಷಗಳನ್ನು ತಿದ್ದುತ್ತ, ಖಂಡಿಸುತ್ತ ಗುಣಮಟ್ಟದ ಪತ್ರಿಕೆಯಾಗುವಂತೆ ಮಾಡಿದಳು. ದೊಡ್ಡ ಪ್ರಮಾಣದಲ್ಲಿ ಕೊಟ್ಟಿದ್ದ ಅವಳ ಲೇಖನಗಳು ಅವಳ ಮರಣಾನಂತರವೂ ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು.

ರಮಾನಂದರು ಅನಾರೋಗ್ಯಕ್ಕೆ ತುತ್ತಾಗಿ ಮಲಗಿಬಿಟ್ಟಿದ್ದಾರೆ ಎಂಬ ಸುದ್ದಿ ಒಂದು ದಿನ ನಿವೇದಿತಾಳ ಕಿವಿಯ ಮೇಲೆ ಬಿತ್ತು. ಕೂಡಲೇ ಅವಳು ಅವರ ಬಳಿಗೆ ಓಡೋಡಿ ಹೋದಳು. ಅವರು ಮಲಗಿದ್ದ ಕೊಠಡಿಯ ಹೊರಗೆ ತನ್ನ ಪಾದರಕ್ಷೆಗಳನ್ನು ಕಳಚಿ ಒಳಹೊಕ್ಕಳು. ಆಗ ಯಾರೋ, ''ನೀವು ಪಾದರಕ್ಷೆ ಧರಿಸಿಕೊಂಡೇ ಹೋಗಬಹುದು, ಹೊರಗೆ ಬಿಡುವ ಅಗತ್ಯವಿಲ್ಲ'' ಎಂದರು. ಆಗ ನಿವೇದಿತಾ, ''ಅವರೊಬ್ಬ ಪುಣ್ಯಜೀವಿ, ಸಾರಸ್ವತ ತಪಸ್ವಿ. ಅಂಥವರು ಅಸ್ವಸ್ಥರಾಗಿ ಮಲಗಿರುವಾಗ ನಾವು ಪಾದರಕ್ಷೆ ತೊಟ್ಟು ಅವರ ದರ್ಶನ ಮಾಡುವುದು ಸರಿಯಲ್ಲ'' ಎಂದಳು. ಸ್ವಾಮಿ ವಿವೇಕಾನಂದರ 'ಆಧ್ಯಾತ್ಮಿಕ ಪುತ್ರಿ'ಯಲ್ಲದೆ ಬೇರೆ ಯಾರು ತಾನೇ ಇಂತಹ ಸಚ್ಚಾರಿತ್ರ್ಯದ ಪಾಠಗಳನ್ನು ಬೋಧಿಸಬಲ್ಲರು!

ರಮಾನಂದರ ಹಾಗೆ ನಿವೇದಿತಾಳನ್ನು ಮೆಚ್ಚಿಕೊಂಡವರು ಮತ್ತೊಬ್ಬರಿಲ್ಲ. ''ನಿವೇದಿತಾ ಹುಟ್ಟು ಪತ್ರಿಕೋದ್ಯಮಿ, ಪ್ರಚಂಡ ರಾಷ್ಟ್ರಭಕ್ತೆ. ಅವಳು ನಮಗೆ ಮಾಡಿದ ಸಹಾಯ ಗಣನೆಗೆ ಮೀರಿದುದು. ಅವಳ ಅಭಿಪ್ರಾಯಗಳು ಕ್ರಾಂತಿಕಾರಿಯೂ ಸುನಿಶ್ಚಿತವೂ ಆಗಿದ್ದವು. ಸ್ವಾತಂತ್ರ್ಯಕ್ಕಾಗಿ ನಾವೆಲ್ಲರೂ ಐಕಮತ್ಯದಿಂದ ಹೋರಾಡಬೇಕೆಂದು ಅವಳು ಹೇಳುತ್ತಿದ್ದಳು. ಅವಳ ಹಾಗೆ ಈ ಲೋಕದಲ್ಲಿ ದಯಾಪೂರ್ಣರಾಗಿಯೂ ಖಂಡಿಸುವವರು, ಖಂಡಿಸುವವರಾಗಿಯೂ ದಯಾಪೂರ್ಣರು ಇದ್ದಿದ್ದರೆ ಸ್ವರ್ಗವೇ ಭೂಮಿಗಿಳಿದು ಬರುತ್ತಿತ್ತು'' ಎಂಬ ಮಾತುಗಳನ್ನು ಅವರು ವಿಸ್ತಾರವಾಗಿ ಬರೆದಿದ್ದಾರೆ.

### ಜದುನಾಥ ಸರ್ಕಾರ್



ಬಂಗಾಳದ ಇತಿಹಾಸಜ್ಞರಲ್ಲಿ ಜದುನಾಥ ಸರ್ಕಾರ್ ಅತ್ಯಂತ ಗಣ್ಯಮಾನ್ಯರಾಗಿದ್ದರು. ನಿವೇದಿತಾ ತನ್ನ ದೇಶಸಂಚಾರ ಕಾಲದಲ್ಲಿ ಪಾಟ್ನಾದಲ್ಲಿ ಉಪನ್ಯಾಸಗಳನ್ನು ಮಾಡುವಾಗ, ಅಲ್ಲಿನ ಸಭೆಗಳಿಗೆ ಜದುನಾಥ ಸರ್ಕಾರರೇ ಅವಳ ಪರಿಚಯ ಮಾಡಿಸುತ್ತಿದ್ದರು. ನಿವೇದಿತಾಳ ಬೋಧಗಯಾದ ಯಾತ್ರೆಯ ಕಾಲದಲ್ಲಿ ಅವಳೊಡನಿದ್ದ ವಿದ್ವಾಂಸರ ತಂಡದಲ್ಲಿ ಜದುನಾಥರೂ ಇದ್ದರು. ಅಲ್ಲೊಂದು ಕಲ್ಲುಚಪ್ಪಡಿಯ ಮೇಲೆ ವಜ್ರದ ಗುರುತುಗಳನ್ನು ಕೆತ್ತಿರುವುದನ್ನು ನಿವೇದಿತಾ ಎಲ್ಲರ ಗಮನಕ್ಕೂ ತಂದಳು. ತಾನು ಮಾಡಿದ್ದ ಬೌದ್ಧಧರ್ಮದ ಅಧ್ಯಯನದ ಬಲದಿಂದ ಆ ವಜ್ರದ ಗುರುತಿಗೂ ಬುದ್ಧನಿಗೂ ಸಂಬಂಧವಿದೆಯೆಂದು ಜೋಡಣೆ ಮಾಡಿದಳು. ಈ ವಜ್ರವನ್ನು ಇಂದ್ರನು ಬುದ್ಧನಿಗೆ ಕೊಟ್ಟನೆಂಬ ಪ್ರತೀತಿಯಿದೆ ಎಂದು ಕಥಾವೃತ್ತಾಂತವನ್ನೂ ಹೇಳಿದಳು. ಇದೆಲ್ಲವನ್ನೂ ವಿವರಿಸುತ್ತ ಜದುನಾಥರು, ''ನಿವೇದಿತಾ ಭಾರತೀಯ ಶಾಸ್ತ್ರ, ಕಲೆ ಮತ್ತು ಪರಂಪರೆಗಳ ಅಂತರಾರ್ಥವನ್ನು ಅರಿತು ವಿವರಿಸುವ ಪರಿಯನ್ನು ಕಂಡು ನಮಗೆ ಪರಮಾಶ್ಚರ್ಯವಾಯಿತು. ಅವಳ ವ್ಯಾಖ್ಯಾನ ಪರಮಾದ್ಭುತವಾಗಿತ್ತು. ಯಾವುದೇ ವಸ್ತುವಿನ ಅಂತರಾಳವನ್ನು ಹೊಕ್ಕುನೋಡುವ ಶಕ್ತಿಸಾಮರ್ಥ್ಯ ಅವಳಿಗಿದ್ದವು'' ಎಂದು ಕೊಂಡಾಡಿದ್ದಾರೆ. ವಜ್ರವೆಂದರೆ ದಧೀಚಿಮುನಿಯ ಮೂಳೆಯಿಂದಾದ ವಜ್ರಾಯುಧವೂ ಹೌದು ಎಂದು ನಿವೇದಿತಾ ಸಮೀಕರಿಸುತ್ತಿದ್ದಳು. ವಜ್ರವೆಂದರೆ ಪದಾರ್ಥವೇ ಮುಂತಾದ ಹಲವು ಶ್ರೇಷ್ಠಮೌಲ್ಯಗಳ ಸಂಕೇತವೆಂದು ನಿವೇದಿತಾ ವಿಸ್ತಾರವಾಗಿ ವಿವರಿಸಿದ್ದಾಳೆ. ವಜ್ರದ ಚಿಹ್ನೆಯುಳ್ಳ, ವಂದೇಮಾತರಂ ಮಂತ್ರವಿರುವ ಒಂದು ರಾಷ್ಟ್ರಧ್ವಜವನ್ನೇ ಅವಳು ರೂಪಿಸಿದ್ದಳು. ತನ್ನ ಗ್ರಂಥಗಳಿಗೆ ಅವಳು ವಜ್ರಚಿಹ್ನೆಯನ್ನು ಇರಿಸಿಕೊಂಡಿದ್ದಳು.

### ಬಿಪಿನ್ ಚಂದ್ರಪಾಲ್

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂಬ ಎರಡು ಗುಂಪಿನ ಜನರಿದ್ದರು.



ಮಂದಗಾಮಿಗಳು ಅಹಿಂಸಾತ್ಮಕ ಹೋರಾಟಕ್ಕೆ ತಮ್ಮನ್ನು ತೆತ್ತುಕೊಂಡಿದ್ದರೆ, ತೀವ್ರಗಾಮಿಗಳು ಅಗತ್ಯಬಿದ್ದರೆ ಆಯುಧಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಹೇಳುತ್ತಿದ್ದರು. ಬಿಪಿನ್‌ಚಂದ್ರ ಪಾಲರು ತೀವ್ರವಾದಿ ಗುಂಪಿಗೆ ಸೇರಿದವರಾಗಿದ್ದರು. ನಿವೇದಿತಾ ಅವರ ರಾಜಕೀಯ ಬಂಧುವಾಗಿದ್ದಳು. ನಿವೇದಿತಾ ವಿದೇಶಕ್ಕೆ ಹೋಗಿದ್ದಾಗ, ಕೇಂಬ್ರಿಜ್ ನಗರದ ಬುಲ್ ಎಂಬ ಮಹಿಳೆಯ ಮನೆಯಲ್ಲಿ ಪರಸ್ಪರ ಭೇಟಿಯಾಗಿ ವಿಚಾರವಿನಿಮಯ ನಡೆಸಿದರು. ರಾಜಕೀಯ ಬಂಧುತ್ವವಿದ್ದರೂ ಒಬ್ಬರನ್ನೊಬ್ಬರು ಒಪ್ಪುತ್ತಿರಲಿಲ್ಲ. ಪರಸ್ಪರ 'ಏತಿ ಅಂದರೆ ಪ್ರೇತಿ' ಎಂಬಂತಿತ್ತು ಅವರ ವರ್ತನೆ. ''ಜೋತಿಷ್ಯವು ಹೇಳುವಂತೆ ನಾನು ರಾಕ್ಷಸಗಣ, ಅವಳು ದೇವಗಣ'' ಎಂದು ಪಾಲರೇ ಒಂದೆಡೆ ಹೇಳಿದ್ದಾರೆ.

ಬಿಪಿನ್‌ಚಂದ್ರರು ಬ್ರಹ್ಮಸಮಾಜದವರಾಗಿದ್ದರು. ಆ ತತ್ತ್ವಗಳು ನಿವೇದಿತೆಗೆ ಹಿಡಿಸದೆ ಬ್ರಹ್ಮಸಮಾಜವನ್ನು ಖಂಡಿಸುತ್ತಿದ್ದಳು. ಹೀಗೆಯೇ ವಾಗ್ಯುದ್ಧ ನಡೆಯುತ್ತಿರುವಾಗ ಒಮ್ಮೆ ಬಿಪಿನ್ ಚಂದ್ರರು ನಿವೇದಿತಾಳನ್ನು ಛೇಡಿಸಲೆಂದು ''ವಿವೇಕಾನಂದರನ್ನು ಹಿಂದೂ ಸಮಾಜ ತಮ್ಮ ಗುರುವೆಂದು ಸ್ವೀಕರಿಸಿಲ್ಲ. ಅವರು ಕೇವಲ ರಾಜಾ ರಾಮಮೋಹನರಾಯ್ ಮುಂತಾದವರಂತೆ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರಷ್ಟೇ'' ಎಂದರು. ಆ ಗುರುನಿಂದನೆಯನ್ನು ಕೇಳಲಾರದೆ ನಿವೇದಿತಾ, ''ಬ್ರಾಹ್ಮಣರೇ ಆದಿಯಾಗಿ ಎಲ್ಲ ಹಿಂದೂಗಳೂ ವಿವೇಕಾನಂದರನ್ನು ತಮ್ಮ ಗುರುವೆಂದು ಸ್ವೀಕರಿಸಿದ್ದಾರೆ'' ಎಂದು ಹೇಳುತ್ತ ಅವರನ್ನು ಚೆನ್ನಾಗಿ ಜಾಲಾಡಿದಳು. ಈ ವಾಗ್ಯುದ್ಧಗಳೆಲ್ಲ ವೈಚಾರಿಕ ನೆಲೆಯಲ್ಲಿ ತೇಲಿಹೋಗುತ್ತಿದ್ದವೇ ಹೊರತು, ಸ್ನೇಹಭಂಗವಾಗುತ್ತಿರಲಿಲ್ಲ.


ಮುಂದಕ್ಕೆ ಬಿಪಿನ್‌ಚಂದ್ರರು ಬೋಸ್ಟನ್‌ಪಟ್ಟಣದ 'ವಾರ್ಷಿಕ ಧರ್ಮಸಮ್ಮೇಳನ'ದಲ್ಲಿ ಮಾತನಾಡಿದಾಗ ನಿವೇದಿತೆಯೂ ಆ ವೇದಿಕೆಯಲ್ಲಿದ್ದಳು. ಭಾರತದ ಆಧ್ಯಾತ್ಮಿಕ ಹಿರಿಮೆಯನ್ನು ಪಾಲರು ಮನದುಂಬಿ ಬಣ್ಣಿಸಿದುದನ್ನು ಕೇಳಿ ನಿವೇದಿತಾ ಪರಮಾನಂದಭರಿತೆಯಾಗಿದ್ದಳು. ಹಿಂದಿನ ಯಾವುದೇ ಕಹಿಯನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಅವರು ಮಾಡಿದ ಭಾಷಣವನ್ನು ಮನಸಾರೆ ಕೊಂಡಾಡಿದಳು.

ಬಿಪಿನ್‌ಚಂದ್ರರು ಕೋಲ್ಕತ್ತೆಯಲ್ಲಿ 'ನ್ಯೂ ಇಂಡಿಯಾ' ಎಂಬ ವಾರಪತ್ರಿಕೆಯನ್ನು ನಡೆಸುತ್ತಿದ್ದರು. ನಿವೇದಿತಾ ಅದಕ್ಕೆ ಸಾರೋದ್ಧಾರವಾಗಿ ಲೇಖನಗಳನ್ನು ಬರೆಯುತ್ತಿದ್ದಳು. ಒಮ್ಮೆ ನಿವೇದಿತಾ 'ಡೈನಮಿಕ್ ರಿಲಿಜನ್' ಎಂಬ ವಿಷಯದ ಮೇಲೆ ಭಾಷಣ ಮಾಡಿದಳು. ಅದು ಕ್ರಾಂತಿಕಾರಿ ವಿಚಾರಗಳಿಂದ ತುಂಬಿತುಳುಕುತ್ತಿತ್ತು. ಅದನ್ನು ಕೇಳಿಸಿಕೊಂಡ ಪಾಲರು, ''ಈ ದಿನ ನಿನ್ನ ವಿಚಾರಗಳು ನಿಜಕ್ಕೂ 'ಡೈನಮೈಟ್ ರಿಲಿಜನ್' ''ಎಂದು ಹೊಗಳಿದರು. ''ಯಾವ ಭಾರತೀಯನೂ ನಿವೇದಿತಾ ಪ್ರೀತಿಸಿದಷ್ಟು ಗಾಢವಾಗಿ

ಈ ನಾಡನ್ನು ಪ್ರೀತಿಸಲಿಲ್ಲವೆಂದು ನಾನು ಭಾವಿಸುತ್ತೇನೆ'' ಎಂದು ಪಾಲರು ಬರೆದಿದ್ದಾರೆ.

### ಅರವಿಂದ ಘೋಷ್

ರಾಷ್ಟ್ರಜಾಗೃತಿಯ ಉದ್ದೇಶದಿಂದ ಉಪನ್ಯಾಸ ನೀಡಲು ನಿವೇದಿತಾ ಬರೋಡಾಕ್ಕೆ ಹೋಗಿ ದ್ದಾಗ, ಅಲ್ಲಿನ ವಿಶ್ವವಿದ್ಯಾನಿಲಯ



ದಲ್ಲಿ ಪ್ರಾಧ್ಯಾಪಕರಾಗಿದ್ದ ಅರವಿಂದ ಘೋಷರ ಪರಿಚಯ ಅವಳಿಗಾಯಿತು. ಅಲ್ಲಿಂದ ಮುಂದಕ್ಕೆ ಅವರಿಬ್ಬರೂ ಅನೇಕ ರಾಜಕೀಯ ಚಟುವಟಿಕೆಗಳಲ್ಲಿ ಸಹಭಾಗಿಗಳಾದರು. ''ಓ ರಾಷ್ಟ್ರೀಯತೆಯೇ, ನೀನು ಸುಖವಾಗಿ ಬಾ, ಅಥವಾ ದುಃಖವಾಗಿ ಬಾ; ಸಮ್ಮಾನವಾಗಿ ಬಾ ಅಥವಾ ಅಪಮಾನವಾಗಿ ಬಾ. ಹೇಗಾದರೂ ಸರಿಯೆ, ನನ್ನನ್ನು ನಿನ್ನವನ್ನನ್ನಾಗಿ ಮಾಡಿಕೋ'' ಎಂಬ ರಾಷ್ಟ್ರೀಯತೆಯ ಮಂತ್ರದೀಕ್ಷೆಯನ್ನು ನಿವೇದಿತಾ ತನ್ನ ಸಂಪರ್ಕಕ್ಕೆ ಬಂದ ಎಲ್ಲ ಸ್ವಾತಂತ್ರ್ಯವೀರರಿಗೂ ಕೊಟ್ಟಳು.

ಅಲೀಪುರ ಬಾಂಬ್‌ಸ್ಫೋಟಕ್ಕೆ ಸಂಬಂಧಿಸಿದಂತೆ ಬ್ರಿಟಿಷರು ತೀವ್ರಗಾಮಿಗಳಾಗಿದ್ದ ಅರವಿಂದರನ್ನು ಒಂದು ವರ್ಷಕಾಲ ಸೆರೆಮನೆಗೆ ತಳ್ಳಿಬಿಟ್ಟರು. ಅವರು ಬಿಡುಗಡೆಗೊಂಡು ಹೊರಕ್ಕೆ ಬರುವ ಹೊತ್ತಿಗೆ ಚಳುವಳಿಯ ಕಾವು ಆರಿಹೋಗಿತ್ತು. ಅದನ್ನು ಮತ್ತೆ ಉಜ್ವಲಗೊಳಿಸಲು ಇಂಗ್ಲಿಷಿನಲ್ಲಿ **'ಕರ್ಮಯೋಗಿನ್'** ಮತ್ತು ಬಂಗಾಳಿಯಲ್ಲಿ **'ಧರ್ಮ'** ಎಂಬ ಸಾಪ್ತಾಹಿಕಗಳನ್ನು ಪ್ರಾರಂಭಿಸಿದರು. ಅದನ್ನು ಸಹಿಸಲಾರದೆ ಬ್ರಿಟಿಷರು ಅರವಿಂದರನ್ನು ಗಡೀಪಾರು ಮಾಡುವ ಅಕಾರ್ಯಕ್ಕೆ ಕೈಯಿಕ್ಕಿದರು. ಆ ವಿಷಯವನ್ನು ಪೂರ್ವಭಾವಿಯಾಗಿಯೇ ಸಂಗ್ರಹಿಸಿಕೊಂಡ ನಿವೇದಿತಾ ಫ್ರೆಂಚರ ಆಡಳಿತದಲ್ಲಿದ್ದ ಚಂದ್ರನಗರಕ್ಕೆ ಹೋಗಿ ಅಲ್ಲಿಂದಲೇ ಕಾರ್ಯತತ್ಪರರಾಗಬೇಕೆಂದು ಅರವಿಂದರನ್ನು ಒತ್ತಾಯಿಸಿದಳು. 'ಕರ್ಮಯೋಗಿನ್' ಪತ್ರಿಕೆಯ ಜವಾಬ್ದಾರಿಯನ್ನು ನಿವೇದಿತಾಳಿಗೊಪ್ಪಿಸಿ ಅರವಿಂದರು ಚಂದ್ರನಗರಕ್ಕೆ ಹೊರಟುಹೋದರು. ಆ ಹೊತ್ತಿನಲ್ಲಿ ಬರಿಗೈಬಂಟರಾಗಿದ್ದ ಅವರಿಗೆ ನಿವೇದಿತಾ ಒಂದಿಷ್ಟು ಹಣವನ್ನೂ ಕೊಟ್ಟು ಕಳುಹಿಸಿದಳು. ಬಹಳ ಕಷ್ಟದಿಂದ ನಿವೇದಿತಾ 'ಕರ್ಮಯೋಗಿನ್' ಹೊರತರಲಾರಂಭಿಸಿದಳು. ಆ ಪತ್ರಿಕೆಯ ಪ್ರಖರತೆಯನ್ನು ಸಹಿಸಿಕೊಳ್ಳಲಾರದೆ ಬ್ರಿಟಿಷರು ಮೂರೇ ತಿಂಗಳಿಗೆ ಅದನ್ನು ನಿಷೇಧಿಸಿಬಿಟ್ಟರು. ಮುಂದಕ್ಕೆ ಅರವಿಂದರ ಬದುಕಿನಲ್ಲಿ ಹಲವು ತಿರುವುಗಳುಂಟಾಗಿ ಕೊನೆಗೆ ಅವರು ಮಹರ್ಷಿ ಅರವಿಂದರಾದರು.

### ಗೋಪಾಲಕೃಷ್ಣ ಗೋಖಲೆ


ನಿವೇದಿತಾ ತಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರದೆ, ಎಲ್ಲ ಸ್ವಾತಂತ್ರ್ಯ ಹೋರಾಟಗಾರರೊಡನೆ, ಸಂಘಟನೆಗಳೊಡನೆ ಸಂಪರ್ಕವಿರಿಸಿಕೊಂಡಿದ್ದಳು. ಗೋಖಲೆಯವರು ಮಂದಗಾಮಿ ಪಡೆಗೆ ಸೇರಿದ ಸ್ವಾತಂತ್ರ್ಯ ಸೇನಾನಿಯಾಗಿದ್ದರು. ಕೋಲ್ಕತ್ತೆಯಲ್ಲಿದ್ದಷ್ಟು ಕಾಲವೂ ಪ್ರತಿನಿತ್ಯ ನಿವೇದಿತಾಳ ಮನೆಗೆ ಗೋಖಲೆಯವರು ತಾವೇ ಬಂದು ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರು.



೧೯೦೫ ರಲ್ಲಿ ಬನಾರಸ್‌ನಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನಕ್ಕೆ ಗೋಖಲೆಯವರೇ ಅಧ್ಯಕ್ಷರಾಗಿದ್ದರು. ಅವರ ಆಹ್ವಾನದ ಮೇರೆಗೆ ನಿವೇದಿತೆಯೂ ಆ ಸಮ್ಮೇಳನದಲ್ಲಿ ಪಾಲ್ಗೊಂಡಳು. ಆ ಸಮ್ಮೇಳನದಲ್ಲಿ ತೀವ್ರಗಾಮಿಗಳ ವಿಚಾರಧಾರೆಯೇ ಮೇಲುಗೈ ಸಾಧಿಸಿ ಮಂದಗಾಮಿಗಳಿಗೆ ಹಿನ್ನಡೆಯಾಯಿತು. ನಿವೇದಿತಾ ತೀವ್ರ ಗಾಮಿ ವಿಚಾರವಾಹಿನಿಯನ್ನೇ ಹೆಚ್ಚು ಪುರಸ್ಕರಿಸುತ್ತಿದ್ದಳು. ಆ ವಿಷಯ ಗೋಖಲೆಯವರಿಗೂ ತಿಳಿದಿತ್ತು. ಅಂದು ತಮ್ಮ ವಿಚಾರಕ್ಕೆ ಹಿನ್ನಡೆಯುಂಟಾದರೂ ನಿವೇದಿತಾಳ ವಿಷಯದಲ್ಲಿ ಅವರು ಅಸಮಾಧಾನಪಟ್ಟುಕೊಳ್ಳಲಿಲ್ಲ. ''ನಿವೇದಿತಾ ದೇಶಕಾಲಗಳ ಎಲ್ಲೆ ಕಟ್ಟನ್ನು ಮೀರಿದ ಪರಮಶ್ರೇಷ್ಠ ಮಹಿಳೆಯಾಗಿದ್ದಳು. ಅವಳು ಭಾರತದ ಪ್ರಾಚೀನ ವೈಭವವನ್ನು ಮಾತ್ರ ಸ್ವೀಕರಿಸದೆ, ಇಲ್ಲಿನ ದೋಷಗಳನ್ನೂ ಕುಂದು ಕೊರತೆಗಳನ್ನೂ ಸ್ವೀಕರಿಸಿದಳು. ನಮ್ಮ ಜೀವನದ ಕಷ್ಟಕಾರ್ಪಣ್ಯಗಳು ಅವಳನ್ನು ವಿಚಲಿತಗೊಳಿಸಲಿಲ್ಲ. ನಮ್ಮ ಅಜ್ಞಾನವನ್ನಾಗಲಿ, ಮೂಢನಂಬಿಕೆಗಳನ್ನಾಗಲಿ, ಅಶುಚಿತ್ವವನ್ನಾಗಲಿ ಅವಳು ಅಸಹ್ಯಪಡದೆ ಸಹಿಸಿಕೊಂಡಿದ್ದಳು'' ಎಂದು ಗೋಖಲೆಯವರು ನಿವೇದಿತಾಳ ಉನ್ನತ ಚಾರಿತ್ರ್ಯವನ್ನು ಬಹುಪ್ರಕಾರವಾಗಿ ಕೊಂಡಾಡಿದ್ದಾರೆ.

### ಭೂಪೇಂದ್ರನಾಥ ದತ್ತ

ಸ್ವಾಮಿ ವಿವೇಕಾನಂದರ ಸೋದರರಾದ ಭೂಪೇಂದ್ರನಾಥ ದತ್ತರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾಗಿದ್ದರು. ಸ್ವಾತಂತ್ರ್ಯ ಯೋಧರನ್ನೆಲ್ಲ ತನ್ನ ತೆಕ್ಕೆಗೆ ತೆಗೆದುಕೊಂಡಿದ್ದ ನಿವೇದಿತಾ, ವಿವೇಕಾನಂದರ ಸೋದರರನ್ನು ಬಿಟ್ಟಾಳೆಯೇ! ಭೂಪೇಂದ್ರರು **'ಯುಗಾಂತರ'** ಎಂಬ ಪತ್ರಿಕೆಯ ಸಂಪಾದಕರೂ ಆಗಿ ಕ್ರಾಂತಿಕಾರಕ ವಿಚಾರಗಳನ್ನು ಪ್ರಕಟಿಸುತ್ತಿದ್ದರು. ಅದೇ ಕಾರಣವಾಗಿ ಅವರಿಗೆ ಸೆರೆಮನೆಯ ವಾಸ ಪ್ರಾಪ್ತವಾಯಿತು. ಜಾಮೀನಿನ ಮೇಲೆ ಬಿಡಿಸಿಕೊಂಡು ಬರಬೇಕೆಂದು ನಿವೇದಿತಾ ಇನ್ನಿಲ್ಲವೆಂಬಂತೆ ಪ್ರಯತ್ನಿಸಿದಳಾದರೂ ಅದು ಫಲಕಾರಿಯಾಗಲಿಲ್ಲ. ''ನಾವು ಅಗ್ರಗಾಮಿಗಳಾಗಿ ಪ್ರಾಣವನ್ನು ಅರ್ಪಿಸುವವರಾಗಿದ್ದೇವೆ. ನಮ್ಮ ಶರೀರದ ಮೂಲಕ ನಾವು ಸೇತುವೆಯೊಂದನ್ನು ಸಿದ್ಧಪಡಿಸುತ್ತೇವೆ. ಮುಂದಿನ ಸ್ವಾತಂತ್ರ್ಯ ಸೈನಿಕರು ಆ



ಸೇತುವೆಯ ಮೇಲೆ ನಡೆದು ಹೋಗಿ ಸ್ವಾತಂತ್ರ್ಯದ ವಿಜಯೋತ್ಸವನ್ನು ಆಚರಿಸುತ್ತಾರೆ'' ಎಂದು ನಿವೇದಿತಾ ನಿಶ್ಚಯಾತ್ಮಕವಾಗಿ ಹೇಳುತ್ತಿದ್ದಳು. ಅಂತಿರುವಲ್ಲಿ ಅವಳು ಭೂಪೇಂದ್ರರಂತಹ ವೀರರನ್ನು ಹುರಿದುಂಬಿಸದೆ ಇರುತ್ತಾಳೆಯೆ!

ಭೂಪೇಂದ್ರರು ಸೆರೆಮನೆಯಲ್ಲಿದ್ದಾಗ ಆಗಾಗ ಅವರ ಮನೆಗೆ ಹೋಗಿ, ನಿವೇದಿತಾ ಅವರ ತಾಯಿ ಭುವನೇಶ್ವರೀ ದೇವಿಯವರಿಗೆ ಸಮಾಧಾನದ ಮಾತುಗಳನ್ನು ಹೇಳುತ್ತಿದ್ದಳು. ''ಯಾವುದೇ ಪರಿಸ್ಥಿತಿ ಎದುರಾದರೂ ಸರಿಯೆ, ಭುವನೇಶ್ವರೀ ದೇವಿಯವರನ್ನು ನಾನು ನೋಡಿಕೊಳ್ಳುತ್ತೇನೆ'' ಎಂದು ನಿವೇದಿತಾ ಭೂಪೇಂದ್ರರಿಗೆ ಮಾತುಕೊಟ್ಟಿದ್ದಳು. ಆ ಮಾತಿನಂತೆಯೇ ಅವಳು ನಡೆದುಕೊಂಡಳು. ಸೆರೆಮನೆಯಿಂದ ಬಿಡುಗಡೆಗೊಂಡ ಬಳಿಕ ಭೂಪೇಂದ್ರರು ಅಮೆರಿಕೆಗೆ ಹೋಗಿ ಅಲ್ಲಿಂದಲೇ ಚಳುವಳಿಯ ಕೆಲಸಗಳನ್ನು ಮಾಡತೊಡಗಿದರು. ಈ ನಡುವೆ ನಿವೇದಿತಾ ಅಮೇರಿಕಾ ಯಾತ್ರೆ ಕೈಗೊಂಡಿದ್ದಾಗ, ಭೂಪೇಂದ್ರರನ್ನೂ ಸಂಧಿಸಿದಳು. ಆ ಹೊತ್ತಿನಲ್ಲಿ ಅವರು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದ್ದರು. ಆಗ ನಿವೇದಿತಾ ತನ್ನ **'ಕಾಳಿ ದಿ ಮದರ್'** ಎಂಬ ಗ್ರಂಥದ ಪ್ರಕಟನೆಯಿಂದ ತನಗೆ ಲಭಿಸಿದ್ದ ಹಣವನ್ನು ಭೂಪೇಂದ್ರರಿಗೆ ಕೊಟ್ಟು ಸಂತೈಸಿದಳು.

### ಚಾಪೇಕರ್ ಮಾತೆ

ಮುಂಬಯಿಯಲ್ಲಿ ಚಾಪೇಕರ್ ಮನೆತನದ ಮೂವರು ಸೋದರರು ಸ್ವಾತಂತ್ರ್ಯ ಹೋರಾಟದಲ್ಲಿ ಭಾರತಾಂಬೆಗಾಗಿ ತಮ್ಮ ಪ್ರಾಣಗಳನ್ನು ಸಮರ್ಪಿಸಿದ್ದರು. ಆ ವಿಷಯ ನಿವೇದಿತಾಳಿಗೂ ತಿಳಿದಿತ್ತು. ಮುಂಬೈ ಪ್ರವಾಸ ಕಾಲದಲ್ಲಿ ಅವಳು ಚಾಪೇಕರ್ ಸೋದರರ ಮಾತೆಯನ್ನು ಕಾಣಬೇಕೆಂದು ಆಶಿಸಿದಳು. ಪತ್ತೆಮಾಡಿಕೊಂಡು ಅವರ ಮನೆಗೆ ಹೊದಳು. ವೃದ್ಧೆಯಾಗಿ ಸೊರಗಿ ಕುಳಿತಿದ್ದ ಆ ಪುಣ್ಯ ಮಾತೆಯ ದರ್ಶನ ಮಾಡಿದ ಬಳಿಕ, ''ನೀನು ಕೃತಾರ್ಥಳಾಗಿದ್ದೀಯೆ ತಾಯೆ, ಮೂವರು ಸುಪುತ್ರರನ್ನು ಭಾರತಮಾತೆಯ ಮಡಿಲಿಗೊಪ್ಪಿಸಿಬಿಟ್ಟೆ. ನಿನ್ನ ಸಂಕಟವನ್ನು ಯಾರು ತಾನೆ ಭರಿಸಬಲ್ಲರು! ಸಮಾಧಾನ ತಂದುಕೋ, ಕೊರಗಬೇಡ ತಾಯೆ'' ಎಂದು ಸಾಂತ್ವನದ ನುಡಿಗಳನ್ನಾಡಿದಳು. ಆಗ ಆ ಪುಣ್ಯಜೀವಿಯು ಇಲ್ಲ, ''ಇಲ್ಲ, ಅದೇನು ದೊಡ್ಡದಲ್ಲ ಬಿಡು. ಆ ವಿಚಾರವಾಗಿ ನನಗೇನೂ ಕೊರಗಿಲ್ಲ'' ಎಂದಳು. ಆ ಮಾತನ್ನು ಅಷ್ಟಕ್ಕೇ ಬಿಡದೆ ನಿವೇದಿತಾ ''ಮತ್ತಾವುದರ ಕೊರಗು ತಾಯೆ?'' ಎಂದು ಪ್ರಶ್ನಿಸಿದಳು. ಅದಕ್ಕೆ ಉತ್ತರವಾಗಿ ಆ ಮಾತೆ, ''ದೇಶಕ್ಕಾಗಿ ನೀಡಲು ನನಗೆ ಇನ್ನೂ ಇಬ್ಬರು ಮಕ್ಕಳಿಲ್ಲವಲ್ಲ, ಅದೇ ನನಗೆ ಕೊರಗು'' ಎಂದಳು. ಆ ಮಾತನ್ನು ಕೇಳಿ ನಿವೇದಿತಾ ಸ್ತಂಭೀಭೂತಳಾಗಿಬಿಟ್ಟಳು. ಮರುಮಾತಾಡದೆ ಆಕೆಯ ಕಾಲಮೇಲೆ ತಲೆಯಿಟ್ಟು ನಮಸ್ಕರಿಸಿ ಹೊರಬಂದಳು. ಆ ಚಾಪೇಕರ್ ಮಾತೆಯನ್ನೂ ಭಾರತದ ಮಹಾ ವ್ಯಕ್ತಿಗಳ ಗುಂಪಿಗೇ ಸೇರಿಸಬಹುದಲ್ಲವೆ!



### ಆಶ್ಚರ್ಯಜನಕ ವಿಚಾರ

ನಿವೇದಿತಾಳ ಜೀವಿತಾವಧಿ ೪೪ ವರ್ಷಗಳು ಮಾತ್ರವೇ! ಅವಳು ಭಾರತಕ್ಕೆ ಕಾಲಿಟ್ಟಾಗಲೇ ಅವಳಿಗೆ ೩೧ ವರ್ಷ. ಭಾರತದಲ್ಲಿದ್ದ ೧೩ ವರ್ಷಗಳ ಅವಧಿಯಲ್ಲಿ ಎರಡು ಬಾರಿ ವಿದೇಶಯಾತ್ರೆ ಕೈಗೊಂಡು ಅದರಲ್ಲಿಯೇ ನಾಲ್ಕೂವರೆ ವರ್ಷ ಕಳೆದುಹೋಯಿತು. ಹೀಗಾಗಿ ಅವಳು ಭಾರತದ ನೆಲದಲ್ಲಿದ್ದುದು ಕೇವಲ ಎಂಟೂವರೆ ವರ್ಷ ಮಾತ್ರ. ಅಷ್ಟರೊಳಗೆ ಅವಳು ಅದೆಷ್ಟು ಜನ ಮಹಾಪುರುಷರ ಸಂಪರ್ಕ ಸಾಧಿಸಿದಳು, ಅದೆಷ್ಟು ಜನರನ್ನು ಪ್ರೋತ್ಸಾಹಿಸಿದಳು, ಅದೆಷ್ಟು ಜನರನ್ನು ಹುರಿದುಂಬಿಸಿದಳು, ಅದೆಷ್ಟು ಜನರ ಕಣ್ಣೀರನ್ನು ಒರೆಸಿದಳು, ಅದೆಷ್ಟು ಜನರಿಗೆ ಉಪಕಾರ ಮಾಡಿದಳು, ಅದೆಷ್ಟು ಜನರನ್ನು ತಿದ್ದಿದಳು, ಅದೆಷ್ಟು ಓದಿದಳು, ಅದೆಷ್ಟು ಬರೆದಳು ಎಂಬುದನ್ನೆಲ್ಲ ನೋಡಿದರೆ 'ಹೀಗೂ ಉಂಟೆ?' ಎಂದು ಪರಮಾಶ್ಚರ್ಯವಾಗುತ್ತದೆ!


ಆಧಾರ ಗ್ರಂಥಗಳು

*೧. **'ಸೋದರಿ ನಿವೇದಿತಾ'**, ಸ್ವಾಮಿ ನಿತ್ಯಸ್ಥಾನಂದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು; ೨೦೧೦. ಪು. ೩೦೩*

*೨. **'ನಿವೇದಿತಾ ಆಫ್ ಇಂಡಿಯಾ'** ಸ್ವಾಮಿ ಪ್ರಭಾನಂದ, ಶ್ರೀರಾಮಕೃಷ್ಣ ಮಿಷನ್, ಕೋಲ್ಕತ್ತಾ. ೨೦೦೨. ಪು. ೯೮* ❖


## ನಿರ್ಭಯರಾಗಿ!

ನಿವೇದಿತಾ ತನ್ನ ಶಾಲೆಯ ಬಾಲಕಿಯರನ್ನು ದಕ್ಷಿಣೇಶ್ವರ, ಪಶುಶಾಲೆ, ಪುರಾತನ ವಸ್ತುಸಂಗ್ರಹಾಲಯ ಮುಂತಾದ ಹತ್ತಿರದ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಿದ್ದಳು. ಒಮ್ಮೆ ಅವರು ದೋಣಿಯಲ್ಲಿ ಹೋಗುತ್ತಿರುವಾಗ ದೊಡ್ಡ ಅಲೆಗಳಿಂದಾಗಿ ದೋಣಿಯು ಜೋರಾಗಿ ಓಲಾಡತೊಡಗಿತು. ಬಾಲಕಿಯರು ಭಯಗೊಂಡದ್ದನ್ನು ನೋಡಿ ನಿವೇದಿತಾ ಹೇಳಿದಳು: ''ಭಯವೇಕೆ? ದೊಡ್ಡ ಅಲೆಗಳಿಗೆ ಭಯಪಡಬೇಡಿ. ಉತ್ತಮ ಅಂಬಿಗನು ಎಂತಹ ಅಲೆಗಳು ಬಂದರೂ ವಿಚಲಿತನಾಗದೆ ಅಲೆಗಳ ಮೇಲೆಯೆ ಸುಲಭವಾಗಿ ಹಾದುಹೋಗುವನು. ಹಾಗೆಯೇ ನಮ್ಮ ಜೀವನದಲ್ಲಿಯೂ ನಾವು ಧೈರ್ಯದಿಂದಿದ್ದರೆ ಯಾವ ಭಯವೂ ಇರುವುದಿಲ್ಲ.''

*('ಸೋದರಿ ನಿವೇದಿತಾ', ಪು. ೧೮೯)*